ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಬಾಗಲಕೋಟೆ

ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಪ್ರಕಾಶ ಗ. ಖಾಡೆ**

ಲೇಖಕರು

**ರಾಮ ಮನಗೂಳಿ**


**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨
ದೂರವಾಣಿ: ೦೮೦-೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ-ಮೇಲ್: sahithya.academy@gmail.com

**BAGALAKOTE:** An Introduction Book on Places in Karnataka that Played a Major Role in the Freedom Struggle, Written by Rama Managooli, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
೧. ಡಾ. ಎಸ್. ಜಿ. ರಾಮದಾಸ ರೆಡ್ಡಿ
೨. ಡಾ. ಮೃತ್ಯುಂಜಯ ರುಮಾಲೆ
೩. ಶ್ರೀ ನರೇಂದ್ರಕುಮಾರ್ ಎಸ್.ಎಸ್.
೪. ಡಾ. ಪ್ರಕಾಶ ಗ. ಖಾಡೆ
೫. ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/–
ಪುಟ: ೪೮


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೮೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



ಕರ್ನಾಟಕ ಸರ್ಕಾರ

## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಫಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು.



ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ಬಾಗಲಕೋಟೆಯು ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ನೀಡಿದ ಕೊಡುಗೆ ಅನನ್ಯವಾದುದು. ಭಾರತ ಸ್ವಾತಂತ್ರ್ಯ ಹೋರಾಟದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ನಾಡಿನ ೭೫ ಕೇಂದ್ರಗಳನ್ನು ಗುರುತಿಸಿ ಮೊದಲ ಬಾರಿಗೆ ಅವುಗಳ ಚರಿತ್ರೆಯನ್ನು ಕಟ್ಟಿಕೊಡುತ್ತಿರುವುದು ಒಂದು ದಾಖಲೆಯೇ ಸರಿ. ಈ ಅಪೂರ್ವ ಅಭಿಯಾನದಲ್ಲಿ ನನಗೆ ಬಾಗಲಕೋಟೆಯ ಸ್ವಾತಂತ್ರ್ಯ ಹೋರಾಟದ ಚರಿತ್ರೆಯನ್ನು ಬರೆಯಲು ಅನುವು ಮಾಡಿಕೊಟ್ಟದ್ದಕ್ಕಾಗಿ ಮೊದಲು ಅಕಾಡೆಮಿಗೆ ಅಭಿನಂದಿಸುತ್ತೇನೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅತ್ಯಂತ ಕ್ರಿಯಾಶೀಲ ಅಧ್ಯಕ್ಷರಾಗಿರುವ ಡಾ. ಬಿ.ವಿ.ವಸಂತಕುಮಾರ್ ಅವರಿಗೆ, ಹಾಗೂ ರಿಜಿಸ್ಟ್ರಾರ್ ಕರಿಯಪ್ಪನವರಿಗೆ ಮತ್ತು ಈ ಕೃತಿಯನ್ನು ಸಿದ್ಧಪಡಿಸಿಕೊಡಲು ಸೂಚಿಸಿದ ಸಂಪಾದಕರಲ್ಲಿ ಒಬ್ಬರಾಗಿರುವ ನಮ್ಮ ಬಾಗಲಕೋಟೆಯ ಹೆಮ್ಮೆಯ ಸಾಹಿತಿಗಳು ನಮ್ಮ ಆಪ್ತರಾದ ಡಾ.ಪ್ರಕಾಶ ಖಾಡೆ ಅವರಿಗೆ ಮತ್ತು ಮಾಹಿತಿಗಳನ್ನು ಒದಗಿಸಿ ಈ ಕೃತಿ ರೂಪುಗೊಳ್ಳಲು ನೆರವಾದ ಬಾಗಲಕೋಟೆಯ ಸಂಶೋಧಕರಾದ ಡಾ.ವಿನಯಕುಮಾರ ಹಿರೇಮಠ ಅವರಿಗೆ ಕೃತಜ್ಞತೆಗಳು.

**– ರಾಮ ಮನಗೂಳಿ, ಬಾಗಲಕೋಟೆ**

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೧ |
| ಬಾಗಲಕೋಟೆ ಸ್ವಾತಂತ್ರ್ಯ ಹೋರಾಟ | ೧೫ |
| ತಿಲಕರ ಸಂಪರ್ಕ | ೨೦ |
| ಭಾರತ ಸೇವಾದಳ | ೨೨ |
| ಆರನೆಯ ಕರ್ನಾಟಕ ರಾಜಕೀಯ ಪರಿಷತ್ತು | ೨೫ |
| ಗುರುರಾವ ಜೋರಾಪುರ | ೨೭ |
| ಕೃಷ್ಣರಾವ ಜೋರಾಪುರ | ೨೮ |
| ಎನ್.ಆರ್.ಮಳಗಿ | ೨೯ |
| ಹ.ರಾ.ಪುರೋಹಿತ | ೩೦ |
| ಮಂಗಳವೇಡೆ ಶ್ರೀನಿವಾಸರಾಯರು | ೩೦ |
| ಸಮಾರೋಪ | ೩೨ |
| ಅನುಬಂಧ ೧ | |
| ಅಪ್ರತಿಮ ದೇಶಭಕ್ತ, ಸ್ವಾತಂತ್ರ್ಯ ಹೋರಾಟಗಾರರು; ಶ್ರೀ ಪರಪ್ಪ ಸಂಗಪ್ಪ ಸಜ್ಜನ | ೩೪ |

| | |
|---|---|
| ಬಾಲ್ಯದ ಜೀವನ | ೩೫ |
| ದೇಶಿ ಉಡುಪು, ದೇಶಪ್ರೇಮ | ೩೬ |
| ಸಾಹಿತ್ಯ ಪ್ರೇಮಿ | ೩೭ |
| ಅಸಹಕಾರ ಚಳುವಳಿಯಲ್ಲಿ ಭಾಗಿ | ೩೮ |
| ಜೈಲಿನ ಜೀವನ | ೪೦ |
| ಮಾನವೀಯ ಮೌಲ್ಯಗಳ ಖಣಿ | ೪೧ |
| ಪರಾಮರ್ಶನ ಗ್ರಂಥಗಳು | ೪೪ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೪೫ |

# ಬಾಗಲಕೋಟೆ ಸ್ವಾತಂತ್ರ್ಯ ಹೋರಾಟ

ಎರಡು ದಶಕಗಳ ಕಾಲ ಪರಕೀಯರ ಕಪಿಮುಷ್ಟಿಯಲ್ಲಿ ನಲುಗಿದ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ದೇಶದ ವೀರಪುತ್ರರ ಹೋರಾಟದ ಕಿಚ್ಚಿಗೆ ಬಾಗಲಕೋಟೆಯು ಸಾಕ್ಷಿಯಾಯಿತು. ಕರ್ನಾಟಕದ ಒಂದು ಮುಖ್ಯ ಜಿಲ್ಲೆಯಾಗಿರುವ ಬಾಗಲಕೋಟೆಯು ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ನೀಡಿದ ಕೊಡುಗೆ ಅವಿಸ್ಮರಣೀಯವಾದುದು. ತಾಯಿನಾಡನ್ನು ಬ್ರಿಟಿಷರ ಗುಲಾಮಗಿರಿಯಿಂದ ಮುಕ್ತಗೊಳಿಸಲು ಹಲವಾರು ದೇಶಪ್ರೇಮಿಗಳು ತಮ್ಮ ರಕ್ತವನ್ನೇ ಬೆವರು ಮಾಡಿ ಸುರಿಸಿದರು. ಈ ಹೋರಾಟದ ಪ್ರತಿಫಲವಾಗಿ ನಮ್ಮ ದೇಶ ೧೫ ಆಗಸ್ಟ್ ೧೯೪೭ ರಂದು ಬ್ರಿಟಿಷ್ ಆಡಳಿತದಿಂದ ಬಿಡುಗಡೆ ಹೊಂದಿ ಸ್ವತಂತ್ರವಾಯಿತು, ಈ ಹೋರಾಟದ ಕಥೆಯೇ ರೋಚಕವಾದುದು.

ಘಟಪ್ರಭೆಯ ತಟಾಕದಲ್ಲಿರುವ ಬಾಗಲಕೋಟೆಯು ಇಂದು ತೀವ್ರಗತಿಯಿಂದ ಬೆಳೆಯುತ್ತಿರುವ ದೇಶದ ಮುಖ್ಯ ನಗರಗಳಲ್ಲೊಂದು. ಐತಿಹಾಸಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ಔದ್ಯೋಗಿಕವಾಗಿ ಮಹತ್ವದ ಸ್ಥಾನ ಹೊಂದಿರುವ ಬಾಗಲಕೋಟೆಯು ಭಾರತ ಸ್ವಾತಂತ್ರ್ಯ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಅಂದರೆ ೧೯೯೭ ರಲ್ಲಿ ವಿಜಯಪುರದಿಂದ ಬೇರ್ಪಟ್ಟು ಒಂದು ಸ್ವತಂತ್ರ ಜಿಲ್ಲೆಯಾಗಿ ಅಸ್ತಿತ್ವಕ್ಕೆ ಬಂದಿತು. ಬಾಗಲಕೋಟೆಯು ಐತಿಹಾಸಿಕ ಕಾಲದಲ್ಲಿ ಬಾದಾಮಿ ಚಾಲುಕ್ಯರ ಕಲ್ಯಾಣ ಕಲಚೂರಿ (ಬಿಜ್ಜಳ), ನಂತರ ವಿಜಯನಗರ, ಸವಣೂರ ನವಾಬರ, ಆದಿಲಶಾಹಿ ಅರಸರ, ಆಮೇಲೆ ಪೇಶ್ವೆಯರ ಹಾಗೂ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟಿತ್ತು.

ಪುರಾಣ ಕಾಲದಲ್ಲಿ ರಾಕ್ಷಸಕುಲ ಸಾರ್ವಭೌಮ, ಪರಶಿವನ ಆತ್ಮಲಿಂಗವನ್ನೇ ತಂದ ಪರಮ ತಪಸ್ವಿ ಲಂಕಾಧಿಪತಿ ರಾವಣಾಸುರನ ಭಜಂತ್ರಿ ಗ್ರಾಮ ಅಂದರೆ ಅವನ ರಾಜ್ಯದ ಸೀಮೆ ಇಲ್ಲಿಂದಲೇ ಪ್ರಾರಂಭವಾಗುತ್ತಿದ್ದುದರಿಂದ

ಅವನ ರಾಜ್ಯದ ಹೆಬ್ಬಾಗಿಲಾಗಿ ಈ ಊರಿತ್ತು ಎಂಬ ಪ್ರತೀತಿ ಇದೆ. ಊರಿನಲ್ಲಿ ನಗಾರೆಖಾನೆಯನ್ನು ಕಟ್ಟಿಸಿ ದಿನಾಲು ಬೆಳಗ್ಗೆ ಹಾಗೂ ಸಾಯಂಕಾಲಗಳ ಪೂಜಾ ಸಮಯದಲ್ಲಿ 'ಚೌಗಡ' ಬಾರಿಸುವುದನ್ನು ಮತ್ತು ವಿಶೇಷ ಸಂದರ್ಭಗಳಲ್ಲಿ ಕೊಂಬು,ಕಹಳೆಗಳನ್ನು ಊದುವುದು ಪರಿಪಾಠವಿದ್ದಿತಂತೆ. ಇದು ಪ್ರತಿ ಹಿಂದೂ ರಾಜರ ಪದ್ಧತಿಯು. ಪೇಶ್ವೆ ರಾಜರ ಆಡಳಿತವಿದ್ದ ಕಡೆಗಳಲ್ಲಿಯೂ ಈ ಪದ್ಧತಿ ಇತ್ತು. ಇಂದಿಗೂ ಬಾಗಲಕೋಟೆಯ ಶ್ರೀ ಮೋಟಗಿ ಬಸವೇಶ್ವರ ಜಾತ್ರೆಯ ಸಮಯದಲ್ಲಿ ಮತ್ತು ನವರಾತ್ರಿಯ ಸಮಯದಲ್ಲಿ ನಗರದ ಕೆಲವೊಂದು ದೇವಸ್ಥಾನಗಳಲ್ಲಿ ಚೌಗಡ ಬಾರಿಸುವುದನ್ನು ಕಾಣುತ್ತೇವೆ. ಅದರಂತೆ ಇಲ್ಲಿನ ಭಜಂತ್ರಿಯವರು ತಮ್ಮ ಶಹನಾಯೀ ವಾದನಕ್ಕಾಗಿ ಸವಣೂರ ನವಾಬರಿಂದ ಬೆಳ್ಳಿ ಶಹನಾಯಿಯನ್ನು ಬಹುಮಾನವಾಗಿ ಪಡೆದುಕೊಂಡಿದ್ದರು.೧೬೬೪ ರಲ್ಲಿ ಶ್ರೀ ಛತ್ರಪತಿ ಶಿವಾಜಿ ಮಹಾರಾಜರು ದಕ್ಷಿಣದ ಜಿಂಜೀ ಕೋಟೆಗೆ ಹೋಗುವಾಗ ಬಾಗಲಕೋಟೆ ನಗರಕ್ಕೆ ಭೇಟಿಕೊಟ್ಟಿದ್ದರೆಂದು ಇತಿಹಾಸ ಸಾರುತ್ತದೆ.

ಈ ಊರು ನೇಕಾರಿಕೆ, ವ್ಯಾಪಾರ, ಒಕ್ಕಲುತನಗಳಿಗೆ ಪ್ರಸಿದ್ಧವಿದ್ದಂತೆ ಇಲ್ಲಿ ತಯಾರಿಸುವ ಬಳೆಗಳೂ ಪ್ರಸಿದ್ಧವಾದ್ದವಂತೆ. ಅಂತೆಯೇ ಬಿಜಾಪುರದ ಆದಿಲ್‌ಶಾಹಿ ಅರಸು ಬಾದಶಹನು ಈ ಊರನ್ನು ತಮ್ಮ ಮಗಳಿಗೆ ಬಳೆ ತೊಡಿಸುತ್ತಿದ್ದ ಬಳೆಗಾರರಿಗೆ ಉಂಬಳಿ ಹಾಕಿಕೊಟ್ಟ ಐತಿಹ್ಯಗಳಿವೆ. ಊರಿನ ಉತ್ಪನ್ನದ ಕೆಲ ಭಾಗ ಬಳೆ ಕಾರ್ಖಾನೆ ನಡೆಸುವದಕ್ಕೂ, ಬಳೆಗಾರರಿಗೂ ವಿನಿಯೋಗವಾಗುತ್ತಿತ್ತು. ಅದಕ್ಕಾಗಿ ಈ ಊರಿಗೆ 'ಬಾಂಗಡಿಕೋಟೆ' ಎಂದು, ಮುಂದೆ ಬರಬರುತ್ತಾ ಬಾಗಲಕೋಟೆ ಎಂದೂ ರೂಢವಾಯಿತು. ಶ್ರೀ ಆನಂದರಾವ ರಾಸ್ತೆ (ಗೋಖಲೆ) ಇವರು ಶ್ರೀಮಂತ ಬಾಳಾಸಾಹೇಬ ಪೇಶ್ವೆಯವರ ಹಿರಿಯ ಅಳಿಯಂದಿರು. ಇವರು ಶೂರರೂ, ಮೇಧಾವಿಗಳೂ, ಆಡಳಿತ ಕುಶಲರೂ ಇದ್ದುದರಿಂದ ಇವರಿಗೆ ಸುಭೇದಾರರೆಂದು ನಿಯುಕ್ತಿಗೊಳಿಸಿ ಬಾಗಲಕೋಟೆ, ಧಾರವಾಡ, ಕಾರವಾರ, ಬೆಳಗಾವಿ ರಾಜ್ಯಗಳ ಉಸ್ತುವಾರಿಯನ್ನು ವಹಿಸಿದ್ದರು. ಆಗ ಈ ರಾಜ್ಯದ ಟಂಕಶಾಲೆ ಕಲಾದಗಿಯಲ್ಲಿದ್ದಿತ್ತೆಂದು ಅಲ್ಲಿಯ ಅಗಸಿಯ ಶಾಸನದಿಂದ ತಿಳಿದುಬರುತ್ತದೆ. ಆನಂದರಾವ ರಾಸ್ತೆ ಅವರ ಸಮರ್ಥ ಆಡಳಿತ ಕಾಲದಲ್ಲಿ ಬಾಗಲಕೋಟೆ ಸಾಕಷ್ಟು ಅಭಿವೃದ್ಧಿ ಹೊಂದತೊಡಗಿತು. ಬೇರೆ ಬೇರೆ ರಾಜ್ಯಗಳಿಂದ ಅನೇಕ ಕಾರ್ಮಿಕರು, ಕುಶಲಕರ್ಮಿಗಳು, ವ್ಯಾಪಾರಸ್ಥರು, ಒಕ್ಕಲಿಗರು, ನೇಕಾರ ಕುಟುಂಬವರ್ಗದವರೂ



ಬರತೊಡಗಿದ್ದರಿಂದ ಸ್ವಾಭಾವಿಕವಾಗಿ ಸ್ಥಳ ಅಭಾವವಾಗಲು ಹಳಪೇಟೆಯ ಕುಂಬಾರ ಓಣಿಯ ಕಡೆ ಅನೇಕ ಮನೆಗಳನ್ನು ನಿರ್ಮಿಸಿ ಅವರೆಲ್ಲರ ವಾಸ್ತವ್ಯಕ್ಕೆ ಅನುಕೂಲತೆ ಒದಗಿಸಿಕೊಡಲಾಯಿತು. ಮೊದಲು ಹಳಪೇಟೆಯ ಮುಳ್ಳಗಸಿಯೇ ಊರಿನ ಪ್ರಮುಖ ದ್ವಾರವಾಗಿದ್ದರೂ, ದಕ್ಷಿಣ ಭಾಗದ ಕೋಟೆ ಕೊತ್ತಲಗಳನ್ನು, ಬುರುಜುಗಳನ್ನು ಪುನಃ ಕಟ್ಟಿಸಿ ಶಿರೂರು ಅಗಸಿಯನ್ನೇ ಪ್ರಮುಖ ಅಗಸಿಯನ್ನಾಗಿ ಮಾಡಿಕೊಳ್ಳಲಾಯಿತು. ಅರಳಿಕಟ್ಟೆ ಹತ್ತಿರ ಅದೇ ಕಾಲಕ್ಕೆ ಮುಚಖಂಡಿ ಅಗಸಿಯೂ ನಿರ್ಮಾಣವಾಯಿತೆಂದು ಹೇಳುತ್ತಾರೆ. ಮುಳ್ಳಗಸಿಯ ನೇರ ಪಶ್ಚಿಮಕ್ಕೆ ವೆಂಕಟಪೇಟೆಯ ಅಡವೀಸ್ವಾಮಿ ಮಠ, ಈ ಕಡೆ ಮುರನಾಳ ಅಗಸಿ, ಆ ಕಡೆ ಇರುವ ಹವೇಲಿ ಆಗ ನಗರದ ಪ್ರಮುಖ ಭಾಗವಾಗಿದ್ದವು. ಹೊನ್ನಾಕಟ್ಟಿಯಲ್ಲಿ ಸೈನಿಕ ಠಾಣೆಗಳಿದ್ದವು. ಶಾಸನಗಳಲ್ಲಿ ಉಲ್ಲೇಖಿತ ಬಾಗಡಗೆ ಕಾಲಾಂತರದಲ್ಲಿ ೧೮ ನೇ ಶತಮಾನದಲ್ಲಿ ಕೋಟೆಯಾದ ಮೇಲೆ ಬಾಗಡಕೋಟೆ ಅಪಭ್ರಂಶ ಹೊಂದಿ ಬಾಗಲಕೋಟೆಯಾಗಿದೆ.

ಕ್ರಿ.ಶ. ೧೮೦೦ ರ ವೇಳೆಗೆ ಆಂಗ್ಲರ ಪ್ರಾಬಲ್ಯತೆಯಿಂದಾಗಿ ೧೮೧೭ ರಲ್ಲಿ ಪೇಶ್ವೆ ಬ್ರಿಟಿಷರ ಸಂಬಂಧ ಕೆಟ್ಟು ಯುದ್ಧ ಅನಿವಾರ್ಯವಾಯಿತು. ೨೦ ದಿನಗಳಲ್ಲಿ ಮನ್ರೋನ ಬೃಹತ್ ಬ್ರಿಟಿಷ್ ಸೈನ್ಯ ಮುತ್ತಿಗೆ ಹಾಕಿ ಬಾದಾಮಿ, ಬಾಗಲಕೋಟೆಗಳನ್ನು ೧೮೧೮ ಮೇ ೧೭ ರಂದು ವಶಪಡಿಸಿಕೊಳ್ಳುವುದರ ಜೊತೆಗೆ ವಿಜಾಪುರ ಭಾಗ ಸಂಪೂರ್ಣವಾಗಿ ಬ್ರಿಟಿಷರ ವಶವಾಯಿತು.

ಪರಕೀಯರ ಆಡಳಿತಕ್ಕೆ ಈ ಭಾಗ ಒಳಗಾಯಿತು. ಬ್ರಿಟಿಷರು ವ್ಯಾಪಾರದ ನೆಪದಿಂದ ಆಗಮಿಸಿ ಆಡಳಿತ ಸೂತ್ರವನ್ನೇ ಹಿಡಿದಾಗ ಅವರ ಬಂಧನದಿಂದ ಬಿಡುಗಡೆ ಹೊಂದುವ ಜಾಗೃತಿ ಇಡೀ ದೇಶದಲ್ಲಿಯೇ ಮೂಡಿತು. ಬ್ರಿಟಿಷ್ ವಿರೋಧಿ ಭಾವನೆಗಳು ಉಗ್ರ ಸ್ವರೂಪದ ಚಳುವಳಿಗೆ ನಾಂದಿ ಹಾಡಿತು. ಹೈದರ ಟಿಪ್ಪು ಪೇಶ್ವೆಗಳಂಥ ರಾಜಸತ್ತೆಗಳನ್ನು ಉರುಳಿಸುವಲ್ಲಿ ಬ್ರಿಟಿಷರು ಯಶಸ್ವಿಯಾದರು. ರಾಷ್ಟ್ರದಾದ್ಯಂತ ಚಲನಶೀಲವಾದ ಈ ಸ್ವಾತಂತ್ರ್ಯ ಹೋರಾಟದಲ್ಲಿ ಬಾಗಲಕೋಟೆಯ ಹೋರಾಟಗಾರರು ವಹಿಸಿದ ಪಾತ್ರ ಮಹತ್ತರವಾದುದು. ರಾಷ್ಟ್ರ ಪ್ರೇಮ, ರಾಷ್ಟ್ರೀಯತೆಯನ್ನು ಜೀವನದ ಉಜ್ವಲ ಸಫಲತೆಗಾಗಿ ಅಗತ್ಯದ ಜ್ಞಾನವನ್ನು ಕಲಿಸುವ ರಾಷ್ಟ್ರೀಯ ಶಾಲೆಯನ್ನು ಸ್ವಾತಂತ್ರ್ಯ ಸೇನಾನಿ ಜೋರಾಪುರ ಗುರುರಾಯರು ಪ್ರಾರಂಭಿಸಿದರು. ಅಲ್ಲದೇ ಕಲಾದಗಿಯ ಹಿತೇಚ್ಛು, ಕನ್ನಡಿಗ ಮುಂತಾದ ಪತ್ರಿಕೆಗಳು ರಾಷ್ಟ್ರಪ್ರಜ್ಞೆ ಮೂಡಿಸುವಲ್ಲಿ ಪ್ರಧಾನ

ಪಾತ್ರ ವಹಿಸಿದವು. ಶಿಕ್ಷಕ ವರ್ಗದಲ್ಲಿ ರಾ.ಸ್ಯಾ.ಪಂಚಮುಖಿ, ಯಲಗುರ್ದರಾವ ಧಾರವಾಡಕರ, ನರಗುಂದ ನಾರಾಯಣರಾಯರು, ಎನ್.ಬಿ. ಬದಾಮಿ ಮೊದಲಾದವರಿದ್ದರು, ಜಯರಾವ ನರಗುಂದರು ವಕೀಲರಾಗಿದ್ದು ೧೯೦೫ ರವರೆಗೆ ಸ್ವದೇಶಿ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಬಾಗಲಕೋಟೆಯಲ್ಲಿದ್ದ ಇವರ ಮನೆ ಚಳುವಳಿಯ ಕೇಂದ್ರವಾಗಿತ್ತು. ಬರೋಡಾದಲ್ಲಿ ತರಬೇತಿ ಪಡೆದಿದ್ದ ಇವರ ಸಹೋದರ ನಾರಾಯಣರಾಯರು ಹಾಗೂ ಮಂಗಳವೇಡರ ರಾಮರಾಯರು ಗರಡಿ ಮನೆ ಹೊಣೆ ಹೊತ್ತಿದ್ದರು. ನಾ.ಸು.ಹರ್ಡೀಕರರಿಂದ ಬಾಗಲಕೋಟೆಯಲ್ಲಿ ಸ್ಥಾಪಿತವಾದ ಹಿಂದೂಸ್ಥಾನೀ ಸೇವಾದಳಕ್ಕೆ ರಾಷ್ಟ್ರದ ಮೂಲೆ ಮೂಲೆಗಳಿಂದ ಸ್ವಯಂ ಸೇವಕರು ತರಬೇತಿಗಾಗಿ ಇಲ್ಲಿಗೆ ಬರುತ್ತಿದ್ದರು. ರಾಷ್ಟ್ರೀಯ ಭಾವನೆಯು ದೇಶದಲ್ಲೆಲ್ಲ ಪ್ರಸರಿಸಿದ್ದು ಇಲ್ಲಿಂದಲೇ.೧೯೧೨ ರಲ್ಲಿ ಕೆರೂರು ವಾಸುದೇವಾಚಾರ್ಯರು ಬಾಗಲಕೋಟೆಯಲ್ಲಿ 'ಶುಭೋದಯ' ವಾರಪತ್ರಿಕೆ ಪ್ರಾರಂಭಿಸಿದರು. ಸುಮಾರು ನಾಲ್ಕು ವರ್ಷ ಪ್ರಸಾರದಲ್ಲಿದ್ದ ಇದು ತಿಲಕರ ಕೇಸರಿಯಷ್ಟೇ ಪ್ರಭಾವಪೂರ್ಣವಾಗಿತ್ತು. ಸಾಮಾಜಿಕ ಕಳಕಳಿಗೆ ಪೂರಕವಾಗಿ ಬಾಗಲಕೋಟೆಯಲ್ಲಿ ಅಕ್ಕನ ಬಳಗ ಸ್ಥಾಪನೆಗೊಂಡು ಜಂಗೀನ ಮುರಗಯ್ಯನವರು ಕಾರ್ಯದರ್ಶಿಗಳಾದರು.

ಬಾಗಲಕೋಟೆಗೆ ರಾಷ್ಟ್ರೀಯ ನೇತಾರರ ಆಗಮನವು ನಿರಂತರವಾಗಿತ್ತು. ಮಹಾತ್ಮ ಗಾಂಧೀಜಿ,ಜವಾಹರಲಾಲ ನೆಹರು,ಸರ್ದಾರ ವಲ್ಲಭಬಾಯಿ ಪಟೇಲ, ಮುರಾರ್ಜಿ ದೇಸಾಯಿ, ಬಿ.ಜಿ.ಖೇರ ಮುಂತಾದವರು ಸ್ವಾತಂತ್ರ್ಯ ಆಂದೋಲನದಲ್ಲಿ ಸ್ಫೂರ್ತಿ ತುಂಬಿ ಭಾಷಣಗಳನ್ನು ಮಾಡಿದರು. ೧೯೨೧ ಮೇ ೨೭ ರಂದು ಬಾಗಲಕೋಟೆಗೆ  ಅಸಹಕಾರ ಚಳುವಳಿ ಮತ್ತು ಪ್ರಚಾರ ಮಾಡಲು ಗಾಂಧೀಜಿಯವರು ಭೇಟಿ ನೀಡಿದ್ದರು. ಗಾಂಧೀಜಿಯವರು ಭೇಟಿಕೊಟ್ಟಾಗ ಸುಮಾರು ೧೧,೦೦೦ ಜನರು ಸೇರಿದ್ದರು. ಅಲ್ಲದೇ ಗಾಂಧೀಜಿ ಸಂಗ್ರಹಿಸಿದ ತಿಲಕ ನಿಧಿಗೆ ಬಾಗಲಕೋಟೆಯಲ್ಲಿ ಆ ಕಾಲಕ್ಕೆ ಒಂದು ಸಾವಿರ ರೂಪಾಯಿ ಸಂಗ್ರಹವಾಯಿತು. ಅಂದು ರೇಲ್ವೆ ಸ್ಟೇಷನ್ ಹತ್ತಿರ ರಾಷ್ಟ್ರೀಯ ಶಾಲೆಯ ವರಾಂಡದಲ್ಲಿ ಸಭೆ ಏರ್ಪಾಡಾಗಿತ್ತು. ಅಸಹಕಾರ ತತ್ವಗಳಾದ ವಿದೇಶಿ ಶಾಲಾ ಕಾಲೇಜುಗಳ ಬಹಿಷ್ಕಾರ, ವಿದೇಶಿ ವಸ್ತುಗಳ ಬಹಿಷ್ಕಾರ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ರಾಷ್ಟ್ರೀಯ ಧ್ವಜ ಖಾದಿಯ ಬದಲಾಗಿ ಕಾಗದದಲ್ಲಿ ಮಾಡಿದ್ದನ್ನು ಕಂಡು ಗಾಂಧೀಜಿಯವರು, "ಎಲ್ಲಿಯವರೆಗೆ ನಿಮ್ಮ



ಧ್ವಜ ಕಾಗದದಲ್ಲಿ ಇರುವದೋ ಅಲ್ಲಿಯವರೆಗೆ ನಮ್ಮ ಸ್ವರಾಜ್ಯ ಕಾಗದದಲ್ಲಿಯೇ ಇರುತ್ತದೆ" ಎಂದು ಟೀಕಿಸಿದರು.

೧೯೩೨ ರಲ್ಲಿ ಬಾಗಲಕೋಟೆಯಲ್ಲಿ ಅಖಿಲ ಕರ್ನಾಟಕ ರಾಜಕೀಯ ಪರಿಷತ್ತು ಸೇರಿತ್ತು. ಈ ಅಧಿವೇಶನ ಉಸ್ತುವಾರಿ ನೋಡಿಕೊಳ್ಳಲು ನಿಟ್ಟೂರು ಶ್ರೀನಿವಾಸರಾಯರು ಬಂದಿದ್ದರು. ಈ ಪರಿಷತ್ತನ್ನು ವಿಫಲಗೊಳಿಸಲು ಪೊಲೀಸರು ನಡೆಸಿದ ಯತ್ನ ವಿಫಲವಾಯಿತು. ಸಭೆ ಸೇರಿ ಎಚ್. ಆರ್. ಪುರೋಹಿತರು (ಮುಂದೆ ಕರ್ಮವೀರ ಸಂಪಾದಕರು) ಅಧ್ಯಕ್ಷ ಭಾಷಣ ಮಾಡಿದರು. ಅಂದು ಸಂತೆ ಇದ್ದುದರಿಂದ ಪೊಲೀಸರಿಗೆ ಸುಳಿವೇ ಸಿಗಲಿಲ್ಲ. ಸಭೆ ನಡೆಯಿತೆಂದು ಕೇಳಿದ ಪೊಲೀಸರು ದಿಗ್ಭ್ರಾಂತರಾಗಿ ಐದು ಜನರನ್ನು ಬಂಧಿಸಿಕೊಂಡು ಹೋದರು. ಸ್ವಾತಂತ್ರ್ಯ ಸಂಗ್ರಾಮದ ಎಲ್ಲ ಹೋರಾಟಗಳಲ್ಲಿ ಭಾಗವಹಿಸಿದ್ದ ಬುರ್ಲಿ ಬಿಂದುಮಾಧವಾಚಾರ್ಯರು ಬಾಗಲಕೋಟೆಯವರು. ಬಾಗಲಕೋಟೆಯಲ್ಲಿ ವೈಯಕ್ತಿಕ ಸತ್ಯಾಗ್ರಹ ನಡೆಸಿದ ಗುರುರಾವ ಜೋರಾಪುರ ಅವರು ಹೋರಾಟದ ಮುಂಚೂಣಿಯಲ್ಲಿದ್ದರು.

ಕಂದಗಲ್ಲ ಹನಮಂತರಾಯರು ವಿಜಾಪುರದಲ್ಲಿ ಶ್ರೀಕೃಷ್ಣ ನಾಟಕ ಸಂಸ್ಥೆ ಎಂಬ ಹವ್ಯಾಸಿ ತಂಡವನ್ನು ಸ್ಥಾಪಿಸಿ ಅದರ ಮೂಲಕ ಸಂಧ್ಯಾರಾಗ, ಎಚ್ಚಮನಾಯಕ ಮುಂತಾದ ನಾಟಕಗಳನ್ನು ವಿಜಾಪುರ ಬಾಗಲಕೋಟೆ ಮುಂತಾದೆಡೆ ಪ್ರದರ್ಶಿಸಿ ರಾಷ್ಟ್ರೀಯ ಚಳುವಳಿಗೆ ಪ್ರಚಾರ ನೀಡಿದರು. ಅಸಹಕಾರ ಚಳುವಳಿಯಲ್ಲಿ ಬಾಗಲಕೋಟೆಯ ದಾಮೂ ಅಣ್ಣ ಲೋಖಡೆಯವರು ಬಂಧಿತರಲ್ಲಿ ಒಬ್ಬರು. ೧೯೨೧ ರಲ್ಲಿ ಪುಣೆಯಲ್ಲಿ ಅಸಹಕಾರ ಚಳುವಳಿಗೆ ಸಂಬಂಧಿಸಿದಂತೆ ನಡೆದ ಸಭೆಯಲ್ಲಿ ವಿದ್ಯಾರ್ಥಿಗಳಿಗೆ ಶಾಲೆ ಕಾಲೇಜುಗಳನ್ನು ತ್ಯಜಿಸುವಂತೆ ಗಂಗಾಧರರಾವ ದೇಶಪಾಂಡೆ ಕರೆಕೊಟ್ಟು ಇಚ್ಛಿಸುವರು ಕೈ ಎತ್ತುವಂತೆ ಹೇಳಿದಾಗ ಬಾಗಲಕೋಟೆಯವರಾದ ಚಿ.ಬಿ.ಪುರೋಹಿತರು ಕೈ ಎತ್ತಿದರೆಂದು ಗಂಗಾಧರರಾವ ದೇಶಪಾಂಡೆ ತಮ್ಮ ಆತ್ಮಚರಿತ್ರೆಯಲ್ಲಿಯೇ ದಾಖಲಿಸಿದ್ದಾರೆ . ಮಂಗಳವೇಡೆ ಶ್ರೀನಿವಾಸರಾಯರು ಕಾಲೇಜಿಗೆ ಬಹಿಷ್ಕಾರ ಹಾಕಿ 'ಕನ್ನಡ ನವಜೀವನ ಸಾಪ್ತಾಹಿಕ ಪತ್ರಿಕೆಯನ್ನು ಆರಂಭಿಸಿ ಅಸಹಕಾರ ಚಳುವಳಿಗೆ ಪೂರಕವಾದ ಸಾಹಿತ್ಯ ಪ್ರಕಟಿಸಲಾರಂಭಿಸಿದರು. ೧೯೨೨ ರ ಜುಲೈ ತಿಂಗಳಲ್ಲಿ ಜಂಗೀನ ಮುರಗಯ್ಯನವರ ಮುಂದಾಳತ್ವದಲ್ಲಿ ಅಖಿಲ ಕರ್ನಾಟಕ ವಸ್ತು ಪ್ರದರ್ಶನ ಏರ್ಪಟ್ಟು ಸ್ವದೇಶಿ ಜಾಗೃತಿಗೆ ಮಹತ್ವದ

ಘಟನೆಯಾಯಿತು. ೧೯೨೮ ರ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿ ಸಭೆ ಮತ್ತು ಅದೇ ವೇಳೆ ನಡೆದ ಡಿ.ವಿ. ಗುಂಡಪ್ಪ ಅವರ ಅಧ್ಯಕ್ಷತೆಯಲ್ಲಿ 'ಕರ್ನಾಟಕ ವೃತ್ತ ಪತ್ರಿಕೆಗಳ ಪರಿಷತ್ತು ಸಮಾವೇಶ' ಯಶಸ್ವಿಯಾಗಿ ನಡೆದದ್ದು ಒಂದು ಐತಿಹಾಸಿಕ ದಾಖಲೆಯಾಗಿದೆ.

## ತಿಲಕರ ಸಂಪರ್ಕ

ಜಯರಾವ ನರಗುಂದ ಅವರು ೧೯೦೦ ರಲ್ಲಿ ತಮ್ಮ ಉನ್ನತ ಶಿಕ್ಷಣವನ್ನು ಪುಣೆಯಲ್ಲಿ ಮುಗಿಸಿ ಬಾಗಲಕೋಟೆಗೆ ಬಂದು ವಕೀಲಿ ವೃತ್ತಿ ಆರಂಭಿಸಿದರು. ಪುಣೆಯಲ್ಲಿದ್ದಾಗ ತಿಲಕರ ಸಂಪರ್ಕ ಹೊಂದಿದ್ದು, ಅವರ ಪ್ರಭಾವದಿಂದ ಬಾಗಲಕೋಟೆಯಲ್ಲಿ ೧೯೦೫ ರಲ್ಲಿ ಸ್ವದೇಶಿ ಚಳುವಳಿಯನ್ನು ಆರಂಭಿಸಿದರು. ವಿದೇಶಿ ಉತ್ಪಾದನೆಯ ವಸ್ತುಗಳಾದ ಸಕ್ಕರೆ, ಸೀಮೆ ಎಣ್ಣೆ ಮತ್ತು ಬಳೆಗಳ ಬಳಕೆಯನ್ನು ಬಹಿಷ್ಕಾರ ಹಾಕುವ ಕಾರ್ಯಕ್ರಮಗಳನ್ನು ಆರಂಭಿಸಿದರು. ಅವರ ಮನೆ ರಾಷ್ಟ್ರೀಯ ಚಳುವಳಿಯ ಕೇಂದ್ರವಾಯಿತು. ಅಷ್ಟೇ ಅಲ್ಲದೇ ಯುವ ಹೋರಾಟಗಾರರಿಗೆ ದೈಹಿಕ ಸಾಮರ್ಥ್ಯವನ್ನು ಬೆಳೆಸಲು ಗರಡಿ ಮನೆಯಾಗಿ ಬೆಳೆಯಿತು. ೧೯೦೬ ರಲ್ಲಿ ಜಯರಾವರ ವಿನಂತಿ ಮೇರೆಗೆ ತಿಲಕರು ಒಬ್ಬ ರಾಮದಾಸಿ ಪಂಥದ ಸನ್ಯಾಸಿಯನ್ನು ಬಾಗಲಕೋಟೆಗೆ ಕಳುಹಿಸಿದರು. ಈ ಸನ್ಯಾಸಿಯು ಒಂದು 'ಶ್ರೀಕೃಷ್ಣ ಪಾಠಶಾಲೆ' ಎಂಬ ರಾಷ್ಟ್ರೀಯ ಶಾಲೆಯನ್ನು ದರಬಾರ ಅವರ ನಿವೇಶನದಲ್ಲಿ ಆರಂಭಿಸಿದರು. ಈ ಮೂಲಕ ನಗರದ ಯುವಕರಿಗೆ ರಾಷ್ಟ್ರೀಯ ಶಿಕ್ಷಣ ನೀಡಲು ಆರಂಭಿಸಿದರು. ಸರಕಾರದ ಒತ್ತಡಕ್ಕೆ ಮಣಿದು ಶಾಲೆಯನ್ನು ಕೆಲವರ್ಷಗಳ ನಂತರ ಮುಚ್ಚಲಾಯಿತು. ಆದರೆ ಈ ಶಾಲೆಯಿಂದ ರಾಷ್ಟ್ರೀಯತೆಯ ಬೀಜ ಬಿತ್ತಿದರು. ಶಾಲೆಯನ್ನು ನಡೆಸಲು ಜಯರಾವ ನರಗುಂದ ಅವರಿಗೆ ವಕೀಲರಾದ ಯಲಗುರ್ದರಾವ ಧಾರವಾಡಕರ, ಹನಮಂತರಾವ ಛಬ್ಬಿ, ಡಾ. ಸವಣೂರ, ರಾಮದಾಸ ದರಬಾರ, ಧಾರವಾಡದ ಸಹಸ್ರಬುದ್ಧೆ ಮುಂತಾದವರು ಸಹಾಯ ಮಾಡಿದರು. ಬ್ರಿಟಿಷ್ ನೌಕರಿಯಲ್ಲಿದ್ದ ಕುಟುಂಬದ ನಿವೃತ್ತ ಮಾಮಲೇದಾರರ ಮಗ ರಾಮರಾವ ಮಂಗಳವೇಡೆ ಅವರು ತೀರಿಕೊಂಡಾಗ ತಿಲಕರ ಕೇಸರಿ ಪತ್ರಿಕೆಯು ಸಂಪಾದಕೀಯ ಲೇಖನ ಬರೆದು ದುಃಖ ಸೂಚಿಸಿತು. ನರಗುಂದ ಅವರ



ಸಹೋದರ ನರಸೀ ಮಾಸ್ತರ ಹಲವಾರು ದಶಕಗಳ ಕಾಲ ಗರಡಿ ಮನೆಯನ್ನು ನಡೆಸಿ ತರುಣರಲ್ಲಿ ರಾಷ್ಟ್ರೀಯ ಜಾಗೃತಿ ಮೂಡಿಸಿದರು.

೧೯೨೦ ರಲ್ಲಿ ಗಾಂಧೀಜಿಯುವರು 'ಅಸಹಕಾರ ಚಳುವಳಿ' ಆರಂಭಿಸಿದಾಗ ಬಾಗಲಕೋಟೆಯ ವಕೀಲರುಗಳಾದ ಜಯರಾವ ನರಗುಂದ, ಕಿರಸೂರ, ಕಟ್ಟಿ, ಬಾಳಾಚಾರ್ಯ ಕೆರೂರ ನ್ಯಾಯಾಲಯವನ್ನು ಬಹಿಷ್ಕರಿಸಿ ವಕೀಲಿ ವೃತ್ತಿಯನ್ನು ತ್ಯಜಿಸಿದರು. ವಿದ್ಯಾರ್ಥಿಗಳು ಬ್ರಿಟಿಷ್ ಸರಕಾರದ ಶಾಲೆಗಳನ್ನು ಬಹಿಷ್ಕರಿಸಿದರು. ಆಗತಾನೆ ಪುಣೆಯಿಂದ ಉನ್ನತ ಶಿಕ್ಷಣ ಮುಗಿಸಿಕೊಂಡು ಬಂದ ನಗರದ ಯುವಕರು ಸರಕಾರಿ ಶಾಲೆ ಬಿಟ್ಟ ವಿದ್ಯಾರ್ಥಿಗಳಿಗಾಗಿ ರಾಷ್ಟ್ರೀಯ ಶಾಲೆಯನ್ನು ಆರಂಭಿಸಿದರು. ರಾಮದಾಸ ದರಬಾರ ಅವರು ಧನಸಹಾಯ ನೀಡುವುದರ ಜೊತೆಗೆ ಶಾಲೆಗೆ ತಮ್ಮ ವಖಾರದಲ್ಲಿ ಸ್ಥಳಾವಕಾಶ ನೀಡಿದರು. ತಮ್ಮಣ್ಣನಾಯಕ ಸವಣೂರ, ಕೃಷ್ಣರಾವ ಮಂಗಳವೇಡೆ, ರಾಮಣ್ಣ ನಾಯಕ ಸೊಲ್ಲಾಪುರ, ಕೃಷ್ಣರಾವ ವಡವಡಗಿ ಮೊದಲಾದವರು ಶಾಲೆಗೆ ಆರ್ಥಿಕ ನೆರವು ನೀಡಿದರು. ಟಿ.ಬಿ.ಪುರೋಹಿತ, ಆರ್.ಎಸ್.ಪಂಚಮುಖಿ, ಆರ್.ಎಸ್.ಬೆಣ್ಣೂರ, ಜಿ.ಬಿ.ಜೋರಾಪುರ, ಎನ್.ವಿ.ಜೋರಾಪುರ, ಎಸ್.ಬಿ.ಸವಣೂರ. ಟಿ.ಎಸ್.ದಾತಾರ, ಹಿರೇಕೆರೂರ, ಎಸ್.ಆರ್.ಕಡಪಿ, ಜಿ.ಡಿ.ಕಟ್ಟಿ, ಎ.ಎಸ್.ಮಳಗಿ ಮೊದಲಾದವರು ಕಾಲೇಜು ಶಿಕ್ಷಣ ತ್ಯಜಿಸಿ ರಾಷ್ಟ್ರೀಯ ಶಾಲೆಯ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಈ ಶಾಲೆಯನ್ನು ಧಾರವಾಡದ ಕೇಂದ್ರ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಅಂಗಸಂಸ್ಥೆಯನ್ನಾಗಿ ಮಾಡಲಾಗಿತ್ತು.

೧೯೨೧ ರಲ್ಲಿ ಶ್ರೀನಿವಾಸರಾವ ಮಂಗಳವೇಡೆ ಅವರು ಗಾಂಧೀಜಿಯವರ ಗುಜರಾತಿ ಭಾಷೆಯ 'ನವಜೀವನ' ಎಂಬ ಪತ್ರಿಕೆಯನ್ನು ಕನ್ನಡಕ್ಕೆ ಅನುವಾದಿಸಿ ಬಾಗಲಕೋಟೆಯಿಂದ 'ನವಜೀವನ' ಎಂಬ ಸಾಪ್ತಾಹಿಕ ಪತ್ರಿಕೆಯನ್ನು ಆರಂಭಿಸಿದರು. ವಿಜಾಪುರದಲ್ಲಿ ಖಾದಿ ಉತ್ಪಾದನಾ ಕೇಂದ್ರ ಸ್ಥಾಪಿಸಿದ ಖ್ಯಾತ ಕವಿಗಳಾದ ಸಾಲಿ ರಾಮಚಂದ್ರರಾಯರು ಗಾಂಧಿಜಿಯವರ ಗುಜರಾತಿ 'ನವಜೀವನ'ದ ಲೇಖನಗಳನ್ನು ಈ ಪತ್ರಿಕೆಯಲ್ಲಿ ಕನ್ನಡಕ್ಕೆ ಅನುವಾದಿಸುತ್ತಿದ್ದರು. ಯಲಗುರ್ದ ಧಾರವಾಡಕರ ಅವರು ಒಂದು ವರ್ಷಗಳ ಕಾಲ 'ನವ ಭಾರತ' ಎಂಬ ಸಾಪ್ತಾಹಿಕ ಪತ್ರಿಕೆಯನ್ನು ಬಾಗಲಕೋಟೆಯಿಂದಲೇ ಆರಂಭಿಸಿದರು.

ಬಾಗಲಕೋಟೆಯ ಸುತ್ತಲು ಕಲಾದಗಿ, ಹುನಗುಂದ, ಗಲಗಲಿಗಳಲ್ಲಿ ೧೯೨೫ ರಲ್ಲಿ ಹನಮಂತರಾವ ಕೌಜಲಗಿ ಅವರು ಖಾದಿ ಉತ್ಪಾದನಾ

ಕೇಂದ್ರಗಳನ್ನು ಆರಂಭಿಸಿ ಸ್ತ್ರೀಯರಿಗೆ ಮತ್ತು ಮಕ್ಕಳಿಗೆ ಉದ್ಯೋಗ ನೀಡಿದರು. ಇದರಿಂದ ಖಾದಿ ಜನಪ್ರಿಯಗೊಂಡಿತು. ಹರ್ಡೇಕರ ಮಂಜಪ್ಪನವರು ವ್ಯಾಪಾರಿಗಳಿಗೂ ಖಾದಿ ಮಾರಾಟಕ್ಕೆ ಪ್ರೋತ್ಸಾಹಿಸಿದರು. ಖಾದಿ ಕೇಂದ್ರ ಡಿಪೋದಲ್ಲಿ ೧೯೨೧ ರಿಂದ ೧೯೩೬ ರ ವರೆಗೆ ಕಾಶೀರಾವ ಆನವಟ್ಟಿ ಅವರು ದುಡಿದರು. ಅಸ್ಪೃಶ್ಯತೆ ನಿವಾರಣಾ ಚಟುವಟಿಕೆಗಳು ಆರಂಭಗೊಂಡು ಮಂದಾಕಿನಿ ಮಂಗಳವೇಡೆ ಹಾಗೂ ಇತರ ತರುಣಿಯರು ಹರಿಜನ ಕೇರಿಗೆ ಸಂದರ್ಶನ ನೀಡಿ ಹರಿಜನರ ಸೇವೆ ಮಾಡುತ್ತಿದ್ದರು. ಕಾಂಗ್ರೆಸ್ಸು ಕರ್ನಾಟಕ ಏಕೀಕರಣ ಚಳುವಳಿಯನ್ನು ಆರಂಭಿಸಿದಾಗ ಬಾಗಲಕೋಟೆಯವರಾದ ಶ್ರೀನಿವಾಸರಾವ ಮಂಗಳವೇಡೆ ಮತ್ತು ಮುರಗಯ್ಯ ಜಂಗೀನ ಈ ಚಳುವಳಿಯಲ್ಲಿ ಮುಂಚೂಣಿಯಲ್ಲಿದ್ದರು.

೧೯೨೩ ರ ನಾಗಪುರ ಧ್ವಜ ಸತ್ಯಾಗ್ರಹದಲ್ಲಿ ಬಾಗಲಕೋಟೆಯ ಶ್ರೀನಿವಾಸರಾವ ನೀರಲಕೇರಿ, ಕೃಷ್ಣ ಪದಕಿ, ಸುಗುಣೇಂದ್ರ ಕೆರೂರ,ವಾಸುದೇವ ಡಂಬಳ, ಬಾಬುರಾವ ಗಣಿ, ಸುಬ್ಬಣ್ಣಾಚಾರಿ ಗೋತೆ, ಹುನಗುಂದದ ಮಧ್ವರಾವ ಪ್ಯಾಟಿ, ಗುಳೇದಗುಡ್ಡದ ಗುಂಡಭಟ್ಟ ಜೋಶಿ ಭಾಗವಹಿಸಿದ್ದರು. ೧೯೨೪ ರಲ್ಲಿ ಮಂಗಳವೇಡೆ ಶ್ರೀನಿವಾಸರಾಯರು 'ಕನ್ನಡಿಗ' ಎಂಬ ಪತ್ರಿಕೆಯನ್ನು ಬಾಗಲಕೋಟೆಯಿಂದ ಆರಂಭಿಸಿದರು. ಮುಂದೆ ಇದು ಹುಬ್ಬಳ್ಳಿಯ 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ವಿಲೀನಗೊಂಡಿತು,  ಆಗ ಸಂಯುಕ್ತ ಕರ್ನಾಟಕದ ಪತ್ರಿಕೆಯ ಮುಖಪುಟದಲ್ಲಿ ಈ ಪತ್ರಿಕೆಯು 'ಕನ್ನಡಿಗ' ಪತ್ರಿಕೆಯನ್ನು ಒಳಗೊಂಡಿದೆ ಎಂದು ಹಲವಾರು ವರ್ಷಗಳ ಕಾಲ ಪ್ರಕಟಿಸಿದರು.

## ಭಾರತ ಸೇವಾದಳ

ಡಾ. ನಾ.ಸು. ಹರ್ಡೀಕರ ಅವರು ಬಾಗಲಕೋಟೆಯನ್ನು ಕೇಂದ್ರವಾಗಿಟ್ಟು ಕೊಂಡು 'ಹಿಂದೂಸ್ಥಾನಿ ಸೇವಾದಳ'ವನ್ನು ಆರಂಭಿಸಿದರು. ಸೇವಾದಳದ ಕಟ್ಟಡವನ್ನು ೧೯೨೭ ರಲ್ಲಿ ಹೈದರಾಬಾದಿನ ವಾಮನರಾವ ನಾಯಕ ಅವರು ಉದ್ಘಾಟಿಸಿದರು. ಈ ಅವಧಿಯಲ್ಲಿ ಕರ್ನಾಟಕ ಛೇಂಬರ್ ಆಫ್ ಕಾಮರ್ಸ್, ಕರ್ನಾಟಕ ಪತ್ರಿಕಾಕರ್ತರ ಸಂಘ, ಅಖಿಲ ಭಾರತೀಯ  ಪಿಜಿಕಲ್ ಅಕಾಡೆಮಿ ಮುಂತಾದ ಸಮ್ಮೇಳನಗಳು ನಡೆದವು. ಸೇವಾದಳದ ಕಟ್ಟಡಕ್ಕೆ ಬಿಂದುರಾವ ನರಗುಂದ ನಿವೇಶನ ನೀಡಿದರು. ಜಯರಾವ ನರಗುಂದ, ರಾಮಣ್ಣ ನಾಯಕ



ಸೋಲಾಪಟ್ಟಿ, ಕಿರಸೂರ ವಕೀಲರು, ಯಲಗುರ್ದರಾವ ಧಾರವಾಡಕರ, ಕೃಷ್ಣರಾವ ಜೋರಾಪುರ, ಮುರಗಯ್ಯ ಜಂಗೀನ ಇವರೆಲ್ಲರೂ ಸೇವಾದಳದ ಕಟ್ಟಡ ನಿರ್ಮಾಣಕ್ಕೆ ವಿಶೇಷ ಆರ್ಥಿಕ ನೆರವು ನೀಡಿದರು, ಸೇವಾದಳಕ್ಕೆ ಖ್ಯಾತ ಕ್ರಾಂತಿಕಾರಿಗಳಾದ ರಾಜಗುರು ಮತ್ತು ಭಗತಸಿಂಗ್ ಭೇಟಿ ನೀಡಿ, ಕೆಲ ದಿವಸಗಳ ಕಾಲ ನೆಲೆ ನಿಂತು ಸೇವಾದಳದ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರವಹಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ತುಂಬಿದರು. ಈ ತರಬೇತಿಗಾಗಿ ಕರ್ನಾಟಕದ ವಿವಿಧ ಭಾಗಗಳಿಂದ ಹಾಗೂ ಭಾರತದ ಇತರ ಪ್ರಾಂತಗಳಿಂದ ತರುಣರು ಬರುತ್ತಿದ್ದರು. ಶ್ರೀನಿವಾಸರಾವ ನೀರಲಕೇರಿ, ಕೃಷ್ಣರಾವ ಜೋರಾಪುರ, ಕೃಷ್ಣರಾವ ಪದಕಿ, ಸುಗುಣೇಂದ್ರ ಕೆರೂರ ಸೇವಾದಳವನ್ನು ನಿರ್ವಹಿಸುತ್ತಿದ್ದರು.

ಬ್ರಿಟಿಷ್ ಸರಕಾರದ ದಬ್ಬಾಳಿಕೆ ಆರಂಭಗೊಂಡಾಗ ನಗರದಲ್ಲಿ ಗುಪ್ತ ಚಟುವಟಿಕೆಗಳು ಆರಂಭಗೊಂಡವು. 'ಕನ್ನಡಿಗ' ಪತ್ರಿಕೆ ೨೫.೭.೧೯೩೦ ರಂದು ನಿರ್ಬಂಧಿಸಲ್ಪಟ್ಟಿತು. ಪತ್ರಿಕೆ ನಿಂತಾಗ 'ಬಹಿಷ್ಕಾರ' ಎಂಬ ಗುಪ್ತ ಕನ್ನಡ ಬುಲೆಟನ್ ಅನ್ನು ಡಾ.ಹರ್ಡೀಕರ ಅವರು ಆರಂಭಿಸಿದರು. ಸುಗುಣೇಂದ್ರ ಕೆರೂರ ಅವರು ಅದನ್ನು ನಿರ್ವಹಿಸುತ್ತಿದ್ದರು.ಏಳು ವರ್ಷಗಳ ಕಾಲ ಶಿಕ್ಷೆಗೆ ಪಾತ್ರವೆನಿಸಿದ ಈ ಚಟುವಟಿಕೆಯನ್ನು ಧೈರ್ಯದಿಂದ ಕೆರೂರ, ಎನ್.ಆರ್. ಮಳಗಿ, ಎನ್.ಎಚ್. ಡಂಬಳ, ಸಿದ್ದಪ್ಪ ಅಕ್ಕಿ, ಲಿಂಗಯ್ಯ ಜಂಗೀನ ಅವರ ನೆರವಿನಿಂದ ನಡೆಸಿದರು. ತಿಂಗಳುಗಟ್ಟಲೇ ಈ ಗುಪ್ತ ಚಟುವಟಿಕೆಯನ್ನು ನಿಲ್ಲಿಸಲಾಗದ ಸರಕಾರ ಮೂರು ತಿಂಗಳೊಳಗೆ ನಿಲ್ಲದಂತೆ ಮಾಡದಿದ್ದರೆ ಕೆಲಸದಿಂದ ಕಿತ್ತು ಹಾಕುವದಾಗಿ ಬಾಗಲಕೋಟೆಯ ಫೌಜದಾರನಿಗೆ ಹಾಗೂ ಡಿ.ಎಸ್ಪಿ. ಗೆ ಬ್ರಿಟಿಷ್ ಸರಕಾರ ಎಚ್ಚರಿಕೆ ನೀಡಿತು. ಪುಣೆಯಿಂದ ಇದಕ್ಕಾಗಿ ಸಿ.ಆಯ್.ಡಿ.ಗಳನ್ನು ಕರೆಸಲಾಯಿತು. ಇದನ್ನು ಸವಾಲಾಗಿ ಸ್ವೀಕರಿಸಿದ ಕೆರೂರ ಅವರು ಸಾರ್ವಜನಿಕ ವೇದಿಕೆಯಲ್ಲಿ ಆಳು ತಿಂಗಳೊಳಗಾಗಿಯಾದರೂ ಈ ಸೈಕ್ಲೋಸ್ಟೈಲ್ ಯಂತ್ರ ಪತ್ತೆ ಹಚ್ಚಿ ಎಂದು ಸರಕಾರಕ್ಕೆ ಸವಾಲು ಎಸೆದರು. ಕೊನೆಗೂ ಪೊಲೀಸರಿಗೆ ಈ ಯಂತ್ರ ಪತ್ತೆ ಹಚ್ಚಲಾಗಲಿಲ್ಲ. ಮಲ್ಲಾಪುರ ಗುಡ್ಡದಲ್ಲಿ ಈ ಯಂತ್ರದಿಂದ ಬುಲೆಟಿನ್ ಗಳನ್ನು ಪ್ರಕಟಿಸುತ್ತಿದ್ದರು.

ಗುಜರಾತಿನಲ್ಲಿ ನಡೆದಂಥ ಅಖಿಲ ಭಾರತೀಯ ಕಾಂಗ್ರೆಸ್ ಸಮ್ಮೇಳನಲ್ಲಿ ಭಾಗವಹಿಸಿ ಬಂದ ಮಂಗಳವೇಡೆ ಅವರು ೧೩.೪.೧೯೩೦ ರಂದು ಕೊತ್ತಲಪ್ಪ ಮಾರುತಿ ದೇವಾಲಯದ ಬಳಿ 'ಬಿಸನಾಳ' ದಲ್ಲಿ ತಯಾರಿಸಿದ ಉಪ್ಪನ್ನು

ಮಾರಲು ಐದು ರೂಪಾಯಿಗೆ ಅಂಡ ಮುರನಾಳ ದೇಸಾಯಿ ಅವರು ಕೊಂಡರು. ಅಲ್ಲಿ ಮಂಗಳವೇಡೆ ಅವರು ಬಂಧನಕ್ಕೊಳಗಾದರು. ಬಿಸನಾಳ ಉಪ್ಪಿನ ಸತ್ಯಾಗ್ರಹದಲ್ಲಿ ಬಾಗಲಕೋಟೆಯಿಂದ ಇಪ್ಪತ್ತು ಮೈಲು ದೂರದ ಬಿಸನಾಳ ಊರ ಹಳ್ಳದಲ್ಲಿ ಹಿಂದೆ ಉಪ್ಪನ್ನು ತಯಾರಿಸುತ್ತಿದ್ದರು. ಇದನ್ನೇ ಸತ್ಯಾಗ್ರಹದ ಸ್ಥಳವಾಗಿ ಆರಿಸಲಾಯಿತು. ಕೃಷ್ಣ ಪದಕಿಯವರನ್ನು ಡಾ. ಹರ್ಡೀಕರ ಅವರು ಈ ಕಾರ್ಯಕ್ಕೆ ನಾಯಕರನ್ನಾಗಿ ನೇಮಿಸಿದರು. ಬಾಗಲಕೋಟೆಯ ಹತ್ತು ತರುಣರನ್ನು ಈ ಕಾರ್ಯಕ್ಕೆ ಕಳುಹಿಸಿಕೊಟ್ಟರು.ಅಲ್ಲಿ ಗೋಲಿಬಾರ್ ಕೂಡಾ ಆಗಬಹುದೆಂದು ಎಚ್ಚರಿಸಿದ್ದರು. ಅದಕ್ಕೂ ಹಿಂಜರಿಯದ ಈ ತರುಣರು ಮೂರು ತಿಂಗಳವರೆಗೆ ಬಿಸನಾಳದಲ್ಲಿ ಉಪ್ಪಿನ ಸತ್ಯಾಗ್ರಹ ನಡೆಸಿ ಊರಿಗೆ ಮರಳಿದರು.

೧೯೩೦ ರ ಅಕ್ಟೋಬರ್‌ದಲ್ಲಿ ಬಾಗಲಕೋಟೆ ಬಳಿಯ ಸಿರೂರಿನಲ್ಲಿ ಅರಣ್ಯ ಸತ್ಯಾಗ್ರಹ ನಡೆಸಿದರು.ಹನಮಂತರಾವ ಕೌಜಲಗಿ, ಮಂಗಳವೇಡೆ ಶ್ರೀನಿವಾಸರಾಯರು ಬಂಧನಕ್ಕೆ ಒಳಗಾದರು. ಮುಂದೆ ಕೃಷ್ಣರಾವ ಜೋರಾಪುರ ಶ್ರೀನಿವಾಸರಾವ ನೀರಲಕೇರಿ, ಸುಗುಣೇಂದ್ರ ಕೆರೂರ ಅವರು ಅರಣ್ಯ ಸತ್ಯಾಗ್ರಹದ ನಾಯಕತ್ವ ವಹಿಸಿ ಬಂಧಿತರಾದರು. ಕೆರೂರ ಗ್ರಾಮವೂ ಕೂಡ ಅರಣ್ಯ ಸತ್ಯಾಗ್ರಹದ ಕೇಂದ್ರವಾಯಿತು. ಬಾಗಲಕೋಟೆಯ ಮಲ್ಲಪ್ಪ ಯಂಡಿಗೇರಿ, ಅಲ್ಲಿಯ ಸ್ವಯಂಸೇವಕರ ಜೊತೆ ಹನುಮನ ಗುಡಿಯಲ್ಲಿ ಶಿಬಿರ ಹೂಡಿದರು. ಸ್ಥಳೀಯರಾದ ಡಾ.ಶಂಕರರಾವ ಮತ್ತು ಚಂದ್ರಣಭಟ್ಟ ಜೋಶಿ ನೆರವು ನೀಡಿದರು.ಇಲ್ಲಿಯ ಸಾನಿಯರ ಮನೆತನದ ಇಬ್ಬರು ತರುಣಿಯರು ಸತ್ಯಾಗ್ರಹದಲ್ಲಿ ಭಾಗವಹಿಸಿ ತಲಾ ನಾಲ್ಕು ತಿಂಗಳ ಶಿಕ್ಷೆ ಅನುಭವಿಸಿದರು.

ಬಾಗಲಕೋಟೆಯ ಮೋಟಾರ ಕಂಪನಿಯ ಮಾಲೀಕರಾದ ಭೀಡಕರ ಅವರು ಸತ್ಯಾಗ್ರಹಿಗಳಿಗೆ ಬಾಗಲಕೋಟೆಯಿಂದ ಕೆರೂರಿಗೆ ಬಸ್ಸಿನ ವ್ಯವಸ್ಥೆ ಮಾಡಿದರು. ಸರಕಾರ ಅವರ ಬಸ್ಸಿನ ಲೈಸನ್ಸನ್ನು ರದ್ದು ಮಾಡಿ ಎರಡು ಬಸ್ಸುಗಳನ್ನು ಜಪ್ತಿ ಮಾಡಿತು. ಮೋಟಾರ ಸರ್ವೀಸಿನ ಅನಂತರಾವ ದೇಶಪಾಂಡೆಯವರು ಸತ್ಯಾಗ್ರಹಕ್ಕೆ ತೆರಳುವ ಸ್ವಯಂ ಸೇವಕರಿಗಾಗಿ ಊಟದ ಪಾಕೆಟ್‌ಗಳನ್ನು ಸರಬರಾಜು ಮಾಡಿದರು.



೧೯೩೧ ರಲ್ಲಿ ಸೊಲ್ಲಾಪುರದಲ್ಲಿ ಮಾರ್ಶಲ್ ಲಾ ಹೇರಿದಾಗ ಬಾಗಲಕೋಟೆಯ ಸೇವಾದಳದ ಕಾರ್ಯಕರ್ತರಾದ ಶ್ರೀನಿವಾಸರಾವ ನರಗುಂದ ಅವರು ಮಾರ್ಷಲ್ ಲಾ ದಿಂದ ಹಿಂಸೆ, ಅತ್ಯಾಚಾರ, ಹಾನಿಗೊಳಗಾದ ಸೊಲ್ಲಾಪುರದ ಜನರ ಕಷ್ಟ ಕೋಟಲೆಗಳ ವರದಿ ಸಂಗ್ರಹಿಸುವ ಕೆಲಸ ಒಪ್ಪಿಸಲಾಯಿತು. ಕೃಷ್ಣರಾವ ಜೋರಾಪುರ, ಏಕಾಂಬರ ಅಯ್ಯರ ಮೊದಲಾದವರು ಅವರಿಗೆ ಸಹಾಯಕರಾಗಿದ್ದರು. ಮಿಲ್ಟ್ರಿ ಬಂದೋಬಸ್ತಿನ, ಹದ್ದಿನ ಕಣ್ಣಿನ ನಡುವೆ ಹಗಲಿರುಳು ನಾಲ್ಕು ತಿಂಗಳ ಕಾಲ ಸೊಲ್ಲಾಪುರದಲ್ಲಿ ಓಡಾಡಿ ೧೧೨ ಭಾವಚಿತ್ರಗಳನ್ನು, ಐದನೂರು ಹೇಳಿಕೆಗಳನ್ನು ಸಂಗ್ರಹಿಸಿದರು. ಈ ಕಾರ್ಯದಲ್ಲಿ ಒಮ್ಮೆ ಬಂಧಿತರಾದರು. ಔದಾರ್ಯದ ಅಧಿಕಾರಿಗಳ ಸಹಾಯದಿಂದ ಬಿಡುಗಡೆಗೊಂಡರು. ಸರ್ದಾರ ವಲ್ಲಭಬಾಯಿ ಪಟೇಲರ ಸಲಹೆಯಂತೆ ಈ ಕಾರ್ಯ ಮಾಡಿ ಮುಗಿಸಿ ವರದಿಯನ್ನು ಮುಂಬಯಿಯ ಬಿ.ಪಿ.ಸಿ.ಸಿ. ಕಾರ್ಯಾಲಯಕ್ಕೆ ತಲುಪಿಸಿ ಬಾಗಲಕೋಟೆಗೆ ಮರಳಿದರು. ಮುಂದೆ ಗುಪ್ತ ಕಾಗದಗಳ ಜೊತೆಗೆ ಅಸ್ಸಾಮಿಗೆ ಕಳಿಸಲ್ಪಟ್ಟರು. ಅಲ್ಲಿ ಎರಡು ತಿಂಗಳು ಕಾಲ ಇದ್ದು ಅಸೌಖ್ಯರಾಗಿ ಸ್ಟ್ರೆಚರ್‌ದಲ್ಲಿ ಅವರನ್ನು ಮುಂಬೈಗೆ ತಂದರು. ಮುಂದೆ ಬಾಗಲಕೋಟೆಗೆ ಬಂದು ತೀರಿಕೊಂಡರು. ಶ್ರೀನಿವಾಸ ನರಗುಂದ ಸ್ವಾತಂತ್ರ್ಯ ಚಳುವಳಿಯ ಹುತಾತ್ಮರಲ್ಲಿ ಒಬ್ಬರು.

೧೯೩೨ ರಲ್ಲಿ ವೈಸರಾಯರ ಸಭೆಗಳನ್ನು ಪ್ರತಿಬಂಧಿಸಿ ಹೊರಡಿಸಿದ ವಿಶೇಷಾಜ್ಞೆ ಮುರಿದು ತಮ್ಮ ವಕೀಲಿ ವೃತ್ತಿ ತ್ಯಜಿಸಿದ್ದ ಗುರುರಾವ ಜೋರಾಪುರ ಅವರು ಜಿಲ್ಲೆಯ ದಕ್ಷಿಣ ಭಾಗದಲೆಲ್ಲಾ ಜನಜಾಗೃತಿಗಾಗಿ ಭಾಷಣ ಮಾಡಿ ಗ್ರಾಮಗಳನ್ನು ಸಂದರ್ಶಿಸಿದರು. ಅವರ ಬಂಧನಕ್ಕೆ ತಮ್ಮ ಜೇಬಿನಲ್ಲಿ ವಾರಂಟ್ ಇದ್ದರೂ ಸ್ಥಳೀಯ ಪೊಲೀಸರು ಬಂಧಿಸುವ ಧೈರ್ಯ ತಾಳಲಿಲ್ಲ. ಮುಂದೆ ವಿಶೇಷ ಪೊಲೀಸ್ ದಳ ತರಿಸಿ ಗುರುರಾಯರನ್ನು ಬಂಧಿಸಲಾಯಿತು.

## ಆರನೆಯ ಕರ್ನಾಟಕ ರಾಜಕೀಯ ಪರಿಷತ್ತು

ಬಾಗಲಕೋಟೆಯಲ್ಲಿ ಆರನೇ ಕರ್ನಾಟಕ ರಾಜಕೀಯ ಪರಿಷತ್ತು ನಡೆಸಲು ಪ್ರಾಂತೀಯ ಕಾಂಗ್ರೆಸ್ ಕಾರ್ಯಸಮಿತಿ ಮಂಗಳವೇಡೆ ಶ್ರೀನಿವಾಸರಾಯರಿಗೆ ಆದೇಶಿಸಿತು. ಈ ಸಭೆಯನ್ನು ನಿರ್ಬಂಧಿಸಲು ನೆರೆಯ ಜಿಲ್ಲೆಗಳಿಂದಲೂ ನೂರಾರು ಪೊಲೀಸರನ್ನು ತಂದು ಭಾರಿ ಬಂದೋಬಸ್ತ್ ನಡೆಸಿದ್ದರೂ

ಪೊಲೀಸರ ಕಣ್ಣು ತಪ್ಪಿಸಿ ಸ್ವಾಗತಾಧ್ಯಕ್ಷರಾದ ಮಂಗಳವೇಡೆ ಅವರು ಪರಿಷತ್ತನ್ನು ನಡೆಸಿದರು. ಗುಡಿ ಗೋವಿಂದಾಚಾರ್ಯರು ಪೊಲೀಸರಿಗೆ ಶಂಕೆ ಬಾರದ ರೀತಿಯಲ್ಲಿ ಭೂಗತ ಕಾರ್ಯಕರ್ತರ ಮತ್ತು ಹೊರಗಣ ಸಾರ್ವಜನಿಕರ ನಡುವಿನ ಸಂಪರ್ಕ ಸಾಧನವಾಗಿ ಕೆಲಸ ಮಾಡಿದರು. ಪರಿಷತ್ತಿನ ತಯಾರಿಕೆ ಬಗ್ಗೆ 'ಬಹಿಷ್ಕಾರ' ಬುಲೆಟಿನ್ ಮೂಲಕ ಹೊರಡಿಸುತ್ತಿದ್ದ ಹೇಳಿಕೆಗಳು ಗೋಪಾಲ ಕೋರಾ ಎಂಬ ಬಾಲಕನಿಂದ ಗೋಡೆಗೆ ಅಂಟಿಸಲ್ಪಡುತ್ತಿದ್ದವು. ಚಾಪ್ಸಿಬಾಯಿ, ಥೊಕರ್ಸಿಬಾಯಿ ಹಾಗೂ ಅವರ ಕುಟುಂಬವರ್ಗದವರು ಭೂಗತರಾದ ಮಂಗಳವೇಡೆ ಅವರಿಗೆ ಆಶ್ರಯ ನೀಡಿದ್ದರು. ಬಾಗಲಕೋಟೆಯ ಶಿರೂರ ಅಗಸಿ ಬಳಿಯ ವೆಂಕಟೇಶ್ವರ ದೇವಾಲಯದ ಹತ್ತಿರವಿದ್ದ ಕೆಲವು ಸ್ತ್ರೀಯರು ಆಶ್ರಯ ನೀಡಿದರು, ಸಿ.ಆಯ್.ಡಿ. ಗಳು ನೂರಾರು ಕಾರ್ಯಕರ್ತರನ್ನು ಬಂಧಿಸಿದರೂ ನಿಶ್ಚಿತ ದಿನ ಮಧ್ಯಾಹ್ನ ಎರಡು ಗಂಟೆಗೆ ಪರಿಷತ್ತು ಯಶಸ್ವಿಯಾಗಿ ನಡೆಯಿತು. ಪರಿಷತ್ತಿನ ಸ್ಥಳದಲ್ಲಿ ಅಧ್ಯಕ್ಷರಾದ ಹ.ರಾ.ಪುರೋಹಿತ, ಸ್ವಾಗತಾಧ್ಯಕ್ಷರಾದ ಮಂಗಳವೇಡೆ ಹಾಗೂ ಕೆರೂರ ಮೊದಲಾದವರ ಬಂಧನವಾಯಿತು. ಎರಡು ದಿನಗಳ ಕಾಲ ತಾಲೂಕಾ ಕಛೇರಿಯಲ್ಲಿದ್ದ ಎರಡುನೂರಕ್ಕೂ ಹೆಚ್ಚು ಬಂಧಿತರಿಗೆ ಊಟದ ವ್ಯವಸ್ಥೆ ಮಾಡಲು ವೆಂಕವ್ವ ಕಾಟಾಪುರ ಎಂಬ ವಿಧವೆ ಹಗಲಿರುಳು ಶ್ರಮಿಸಿದಳು. ಪಿಕೆಟಿಂಗ್ ಕಾರ್ಯಕ್ರಮದಲ್ಲಿ ವೆಂಕೋಬಾಯಿ ಪಾರ್ವತಿಯವರು ಭಾಗವಹಿಸಿ ನಾಲ್ಕು ತಿಂಗಳುಗಳ ಕಾಲ ಜೈಲು ವಾಸ ಅನುಭವಿಸಿದರು.

ಕೌನ್ಸಿಲ್ ಬಹಿಷ್ಕಾರ ನಿರ್ಣಯದಂತೆ ೧೯೩೪ ರ ಚುನಾವಣೆ ಕಾಲಕ್ಕೆ ಬಾಗಲಕೋಟೆ ಮತ್ತು ಗುಳೇದಗುಡ್ಡದಲ್ಲಿ ಒಂದೂ ಮತವು ಪೆಟ್ಟಿಗೆಗೆ ಬೀಳದಂತೆ ಯಶಸ್ವಿಯಾಗಿ ಪ್ರಚಾರ ಮಾಡಲಾಯಿತು. ಎರಡೂ ಊರುಗಳ ಸರಕಾರಿ ನೌಕರರೂ ಮತದಾನ ಮಾಡುವ ಧೈರ್ಯ ತೋರಲಿಲ್ಲ.

೧೯೪೨ ರ ಚಲೇಜಾವ್ ಚಳುವಳಿಯಲ್ಲಿ ಬಾಗಲಕೋಟೆಯ ವ್ಯಾಪಾರಿಗಳು ಭೂಗತರಾದ ಚಳುವಳಿಗಾರರಿಗೆ ಧನಸಹಾಯ ನೀಡಿದರು, ಈ ಪೈಕಿ ಪಂದಸಿಬಾಯಿ ಸ್ಮರಣೀಯರು. ಅಂಬಲಿ ಚೆನ್ನಬಸಪ್ಪನವರ ನೇತೃತ್ವದಲ್ಲಿ ನಡೆದ ಈ ಚಳುವಳಿಯಲ್ಲಿ ಲಿಂಗಯ್ಯ ಜಂಗೀನ, ಸಿದ್ದಪ್ಪ ಮಾಳವಾಡ, ಡ್ರಿಲ್ ಮಾಸ್ತರ ಶಿವಪುತ್ರಪ್ಪ ಪಟ್ಟಣಶೆಟ್ಟಿ, ಸಕ್ರೋಜಿ, ಸಿದ್ದಪ್ಪ ಹುಂಡೇಕಾರ ಭೂಗತರಾಗಿ



ಕಾರ್ಯ ನಿರ್ವಹಿಸಿದರು. ಚಲೇಜಾವ್ ಚಳುವಳಿಯಲ್ಲಿ ಪ್ರಮುಖವಾಗಿ ಬಂಧಿತರಾದವರೆಂದರೆ ಜಯರಾವ ನರಗುಂದ, ಶ್ರೀನಿವಾಸ ನರಗುಂದ, ಗುರಾವ ಜೋರಾಪುರ, ಶ್ರೀನಿವಾಸರಾವ ಮಂಗಳವೇಡೆ, ಶ್ರೀನಿವಾಸರಾವ ನೀರಲಕೇರಿ, ಸುಗುಣೇಂದ್ರ ಕೆರೂರ, ಕೃಷ್ಣ ಪದಕಿ, ಎನ್.ಆರ್.ಮಳಗಿ, ಕೃಷ್ಣ ಕುಲಕರ್ಣಿ, ಜಯರಾವ ಮಿರ್ಜಿ, ಟಿ.ಜಿ.ಹಾಲಳ್ಳಿ, ಸಿದ್ದಪ್ಪ ಅಕ್ಕಿ, ಎನ್.ಎಸ್.ಡಂಬಳ, ಸಿದ್ದಪ್ಪ ಹುಂಡೇಕಾರ, ಲಿಂಗಯ್ಯ ಜಂಗೀನ, ಸುಭದ್ರಾಬಾಯಿ ಬುರ್ಲಿ, ವೆಂಕೂಬಾಯಿ ಪರ್ವತಿ, ಎಚ್.ಆರ್.ಉಮರ್ಜಿ, ಹ.ರಾ.ಪುರೋಹಿತ, ಎಸ್.ಬಿ.ಸವಣೂರ, ಬಿ.ಆರ್.ಹುದ್ದಾರ, ಬಿ.ಎಸ್.ಕಿರಸೂರ , ಕೆ.ಟಿ ಮನಗೂಳಿ, ಚಿಲ್ಲಾಳ ,ಮಂಗಳೂರ, ಬಿಂದುಚಾರ್ಯ ಜಮದಗ್ನಿ, ಸುಗುಣಾಚರ್ಯ ಗದ್ದನಕೇರಿ, ಮಲ್ಲಪ್ಪ ಯಂಡಿಗೇರಿ, ಗುರುರಾವ ಜೋರಾಪುರ, ಕಾಂಬಳೆ, ಲಿಂಗಾಪುರ, ಏಡಕೆ, ಅಪ್ಪಣ್ಣಾ ವೈಜಾಪುರ, ನಾರಾಯಣ ಜೋರಾಪುರ, ಎಸ್.ಆರ್.ಕಂಠಿ ಬಂಧಿತ ಪ್ರಮುಖರು.

## ಗುರುರಾವ ಜೋರಾಪುರ

ಬಾಗಲಕೋಟೆಯವರಾದ ಗುರುರಾಜ ಜೋರಾಪುರ ಅವರು ೧೮೯೭ ರಲ್ಲಿ ಜನಿಸಿದರು. ಚಿಕ್ಕವರಿರುವಾಗಲೇ ಸ್ವದೇಶಿ ಚಳುವಳಿಯ ಪ್ರಭಾವ ಇವರ ಮೇಲಾಯಿತು. ಬಾಗಲಕೋಟೆಯ ನರಗುಂದ ಮಾಸ್ತರ (ನಾರಿ ಮಾಸ್ತರ) ರ ಪ್ರಭಾವಕ್ಕೆ ಒಳಗಾಗಿ ಅವರಿಂದ ದೇಶಭಕ್ತಿಯ ದೀಕ್ಷೆಯನ್ನು ಪಡೆದರು. ೧೯೧೩ ರಲ್ಲಿ ಮ್ಯಾಟ್ರಿಕ್ ಪಾಸಾಗಿ ಬಿ.ಎ. ಯನ್ನು ಓದಲು ಪುಣೆಗೆ ತೆರಳಿದರು. ಅಲ್ಲಿ ಬಾಲಗಂಗಾಧರ ತಿಲಕರ ಪ್ರಭಾವಕ್ಕೆ ಒಳಗಾದರು. ಇದೇ ವೇಳೆಯಲ್ಲಿ ದೇಶಾದ್ಯಂತ ಅಸಹಕಾರ ಚಳುವಳಿ ಆರಂಭವಾದಾಗ ಕಾಲೇಜು ತ್ಯಜಿಸಿ ಬಾಗಲಕೋಟೆಗೆ ಮರಳಿದರು. ಒಟ್ಟು ಹದಿನೈದು ಜನ ಗೆಳೆಯರೊಂದಿಗೆ ಸೇರಿಕೊಂಡು ಬಾಗಲಕೋಟೆಯಲ್ಲಿ ರಾಷ್ಟ್ರೀಯ ಶಾಲೆಯನ್ನು ಆರಂಭಿಸಿದರು. ಮುಂಬೈಯಿಂದ ಬಂದ ಟಿ.ಬಿ.ಪುರೋಹಿತ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು. ಡಾ.ಹರ್ಡೀಕರ ಅವರು ಸೇವಾದಳವನ್ನು ಆರಂಭಿಸಿದಾಗ ಗುರುರಾವ ಹಾಗೂ ಅವರ ಹಿರಿಯ ಸಹೋದರ ಕೃಷ್ಣರಾವ ಮತ್ತು ನೀರಲಕೇರಿ ಶ್ರೀನಿವಾಸರಾವ ಅವರು ಸೇವಾದಳದ ಕಾರ್ಯಭಾರ ಹೊತ್ತರು.

೧೯೨೨ ರಲ್ಲಿ ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಂಡಾಗ ಪುನಃ ಕಾಲೇಜಿಗೆ ಸೇರಿ ಬಿ.ಎ., ಎಲ್.ಎಲ್.ಬಿ.

ಪದವಿಯನ್ನು ೧೯೨೫ ರಲ್ಲಿ ಮುಗಿಸಿದರು. ಶ್ರೀನಿವಾಸ ಮಂಗಳವೇಡೆಯವರ ಜೊತೆಗೂಡಿ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಪಾಲುದಾರಿಕೆ ಪಡೆದು ಕನ್ನಡ 'ನವ ಜೀವನ' ಪತ್ರಿಕೆಯನ್ನು ಹೊರಡಿಸಿದರು. ಸೇವಾದಳದ ಕಟ್ಟಡದ ಉದ್ಘಾಟನಾ ಸಮಾರಂಭದ ಅಂಗವಾಗಿ ಇತಿಹಾಸ ಪ್ರದರ್ಶನ, ವಾಣಿಜ್ಯ ಸಂಸ್ಥೆ ಹಾಗೂ ವರ್ತಮಾನ ಪತ್ರಕರ್ತರ ಸಮ್ಮೇಳನಗಳನ್ನು ಜಂಗೀನ ಮುರಗಯ್ಯನವರ ಜೊತೆ ಸೇರಿಕೊಂಡು ಯಶಸ್ವಿಗೊಳಿಸಿದರು. ಕೆರೂರು ವಾಸುದೇವಾಚಾರ್ಯರ ಸ್ಮರಣಾರ್ಥವಾಗಿ ಸ್ಥಾಪನೆಗೊಂಡ 'ವಾಸುದೇವ ವಿನೋದಿನಿ ನಾಟಕ ಸಭೆ'ಯ ಅಧ್ಯಕ್ಷರಾದರು.

೧೯೩೦, ೧೯೩೨, ೧೯೪೨, ೧೯೪೩ ಗಳಲ್ಲಿ ಒಟ್ಟು ನಾಲ್ಕು ಬಾರಿ ನಾಲ್ಕುವರೆ ವರ್ಷಗಳ ಕಾಲ ಜೈಲುವಾಸ ಅನುಭವಿಸಿದರು. ೧೯೩೪ ರಲ್ಲಿ ಟಿ.ಸಿ.ಸಿ.ಕಾರ್ಯದರ್ಶಿಯಾಗಿ, ೧೯೩೬ ರಲ್ಲಿ ಅದರ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದರು. ೧೯೩೭ ರಲ್ಲಿ ನೇಕಾರ ಪರಿಷತ್ತನ್ನು ಸಂಘಟಿಸಿ ಅದರ ಕಾರ್ಯದರ್ಶಿಯಾದರು. ೧೯೪೨ ರಲ್ಲಿ ಲಮಾಣಿ ಸೇವಾ ಸಮಿತಿ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

## ಕೃಷ್ಣರಾವ ಜೋರಾಪುರ

ಕೃಷ್ಣರಾವ ಜೋರಾಪುರ ಅವರು ಗುರುರಾಜ ಜೋರಾಪುರ ಅವರ ಹಿರಿಯ ಸಹೋದರರು. ಜಯರಾವ ನರಗುಂದ ಅವರ ಒಡನಾಡಿ, ಅವರಿಂದಲೇ ರಾಷ್ಟ್ರೀಯತೆಯ ದೀಕ್ಷೆಯನ್ನು ಪಡೆದರು. ಪುಣೆಯಲ್ಲಿ ಕಾಲೇಜು ಓದುತ್ತಿರುವಾಗ ತಿಲಕರ ಪ್ರಭಾವಕ್ಕೆ ಒಳಗಾಗಿ ಸ್ವದೇಶಿ ವ್ರತವನ್ನು ಅಂಗೀಕರಿಸಿ ತಿಲಕರಂತೆ ಕಸೆಗಳುಳ್ಳ ಬಗಲಗುಂಡಿ ಅಂಗಿಯನ್ನೇ ತೊಡುತ್ತಿದ್ದರು. ಬಾಗಲಕೋಟೆಯಲ್ಲಿ ಛತ್ರಪತಿ ಶಿವಾಜಿ ಉತ್ಸವ ಮತ್ತು ಗಣೇಶ ಉತ್ಸವಗಳ ಮೂಲಕ ರಾಷ್ಟ್ರೀಯತೆಯ ಹೋರಾಟದ ಬೀಜ ಬಿತ್ತಿದರು. ತಿಲಕ ಹಾಗೂ ಗಾಂಧಿ ಯುಗದಲ್ಲಿ ದುಡಿದು ಸ್ವಾತಂತ್ರ್ಯ ಹೋರಾಟಕ್ಕೆ ಕಳೆಗಟ್ಟಿದರು. ಡಾ.ಹರ್ಡೀಕರರ ನೆಚ್ಚಿನ ಶಿಷ್ಯರಾಗಿದ್ದು ಸೇವದಾಳದ ಸರದಾರರೆನಿಸಿದರು. ಸೇವಾದಳ ತರಬೇತಿಗೆ ಹೊರಗಿನಿಂದ ಬರುತ್ತಿದ್ದ ಕಾರ್ಯಕರ್ತರಿಗೆ ತರಬೇತಿ ನೀಡಲು ತಮ್ಮ ಸ್ವಂತ ಖರ್ಚಿನಿಂದ ಹಣ ವೆಚ್ಚಮಾಡಿ ಶಿಬಿರಗಳನ್ನು ಏರ್ಪಡಿಸುತ್ತಿದ್ದರು.



ಬಿಸನಾಳ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದರು.ಕೆರೂರು, ಮಮ್ಮಟಗೇರಿಗಳಲ್ಲಿ ಅರಣ್ಯ ಸತ್ಯಾಗ್ರಹಗಳನ್ನು ಸಂಘಟಿಸಿದರು. ಲೋಕಮಾನ್ಯ ಮೋಟರ್ ಸರ್ವಿಸ್‌ದಲ್ಲಿ ಬಾಗಲಕೋಟೆಯಿಂದ ಸ್ವಯಂ ಸೇವಕರನ್ನು ಕೆರೂರು ಮತ್ತು ಮಮ್ಮಟಗೇರಗಳಿಗೆ ಕಳುಹಿಸಿ ಅವರ ಊಟೋಪಚಾರಕ್ಕಾಗಿ ಕೆರೂರದಲ್ಲಿ ಪಾಕಶಾಲೆಯನ್ನು ತೆರೆದರು. ವೆಂಕೂಬಾಯಿ ಪರ್ವತಿ ಮುಂತಾದ ಮಹಿಳೆಯರನ್ನು ಸಂಘಟಿಸಿ ಮದ್ಯದ ಅಂಗಡಿ ಮುಂದೆ ಪಿಕೆಟಿಂಗ್ ಆರಂಭಿಸಲು ಪ್ರೇರೇಪಿಸಿದರು. ಸೊಲ್ಲಾಪುರದ ಮಾರ್ಶಲ್ ಲಾ ಕಾಲಕ್ಕೆ ಅಲ್ಲಿನ ಜನರಿಗೆ ಸಹಾಯ ಮಾಡಲು ಹೋಗಿ ಸೈನಿಕರ ದೃಷ್ಟಿಗೆ ಬಿದ್ದು ಅಲ್ಲಿಂದ ತಪ್ಪಿಸಿಕೊಂಡು ಅಡವಿ ಸೇರಿ ಎರಡು ದಿನಗಳ ಕಾಲ ಉಪವಾಸ ಅನುಭವಿಸಿದರು. ೧೯೪೨ ರ ಚಲೇಜಾವ್ ಚಳುವಳಿಯಲ್ಲಿ ಪಾಲ್ಗೊಂಡು ರೈಲುಕಂಬಿಗಳನ್ನು ಕೀಳುವಾಗ ಸೆರೆಸಿಕ್ಕರು. ಅನೇಕ ಬಾರಿ ಸರಕಾರ ಇವರ ಆಸ್ತಿಯನ್ನು ಜಪ್ತು ಮಾಡಿತು.

## ಎನ್.ಆರ್.ಮಳಗಿ

ಮೂಲತಃ ಬಾಗಲಕೋಟೆಯವರಾದ ಎನ್.ಆರ್.ಮಳಗಿ ಅವರು ೧೯೧೨ ರಲ್ಲಿ ಜನಿಸಿದರು. ಧಾರವಾಡದಲ್ಲಿ ಹೈಸ್ಕೂಲು ವಿದ್ಯಾರ್ಥಿಗಳಾಗಿದ್ದಾಗ ಮುಂಬೈಯ ಟೈಮ್ಸ್ ಆಫ್ ಇಂಡಿಯಾ ಫ್ರೀ ಪ್ರೆಸ್ ಜರ್ನಲ್ ಹಾಗೂ ಬಾಂಬೆ ಕ್ರಾನಿಕಲ್ ಪತ್ರಿಕೆಗಳನ್ನು ಓದಿ ದೇಶದ ವಿದ್ಯಮಾನಗಳನ್ನು ಅರಿತುಕೊಂಡರು. ೧೯೩೩ ರಲ್ಲಿ ಉಪ್ಪಿನ ಸತ್ಯಾಗ್ರಹ ಆರಂಭಗೊಂಡಾಗ ದ.ಪ.ಕರಮಕರ ಅವರ ಪ್ರಭಾವಕ್ಕೆ ಒಳಗಾಗಿ ಚಳುವಳಿಯಲ್ಲಿ ಭಾಗವಹಿಸಿದರು. ಉಪ್ಪಿನ ಲಿಲಾವನ್ನು ಕೊಂಡು ಬಂಧನಕ್ಕೆ ಒಳಗಾದರು. ನಂತರ ಬಾಗಲಕೋಟೆಗೆ ಮರಳಿ ಸೇವಾದಳವನ್ನು ಸೇರಿ ಕಮಾಡೆಂಟ್ ಆಗಿ ಕಾರ್ಯನಿರ್ವಹಿಸಿದರು. ಶ್ರೀಕೃಷ್ಣ ಪದಕಿಯವರ ಜೊತೆಗೂಡಿ ಬಾಗಲಕೋಟೆಯಿಂದ ಬಿಸನಾಳ ಉಪ್ಪಿನ ಸತ್ಯಾಗ್ರಹಕ್ಕೆ ಕಳುಹಿಸಿದ ತಂಡದಲ್ಲಿ ಮಳಗಿಯವರಿದ್ದರು. ಮೂರು ತಿಂಗಳುಗಳ ಕಾಲ ಅಲ್ಲಿ ಪ್ರತಿ ನಿತ್ಯ ಉಪ್ಪು ತಯಾರು ಮಾಡಿದರು. ಸೊಲ್ಲಾಪುರದಲ್ಲಿ ನಡೆದ ಧ್ವಜಸತ್ಯಾಗ್ರಹಕ್ಕೆ ಗುಪ್ತವಾಗಿ ಸ್ವಯಂಸೇವಕರನ್ನು ಕಳುಹಿಸುವಾಗ ಸೇವಾದಳದ ಕಛೇರಿಯಲ್ಲಿ ಬಂಧನಕ್ಕೊಳಪಟ್ಟರು. ಕಾನೂನು ಬಾಹಿರವಾಗಿ ಗುಂಪು ಕೂಡಿದ ಆಪಾದನೆಗಾಗಿ ನಾಲ್ಕು ತಿಂಗಳು ಜೈಲು ಶಿಕ್ಷೆ ಅನುಭವಿಸಿದರು.

೧೯೩೨ ರಲ್ಲಿ ವೈಸರಾಯ್ ಹೊರಡಿಸಿದ ವಿಶೇಷಾಜ್ಞೆಯಂತೆ ಸೇವಾದಳದ ಕಛೇರಿಯಲ್ಲಿ ಮತ್ತೆ ಬಂಧಿತರಾದರು. ವಿಚಾರಣೆ ಇಲ್ಲದೇ ಒಂದು ತಿಂಗಳ ಕಾಲ ವಿಜಾಪುರ ಜೈಲಿನಲ್ಲಿ ಸರಕಾರ ಇರಿಸಿತು. ವಾರಕ್ಕೆ ಮೂರು ದಿನ ಬಾಗಲಕೋಟೆ ಪೋಲೀಸ್ ಠಾಣೆಯಲ್ಲಿ ಹಾಜರಿ ಕೊಡಬೇಕು ಮತ್ತು ಊರಿನ ಹದ್ದು ಬಿಟ್ಟು ಹೋಗಬಾರದೆಂಬ ಶರತ್ತಿನೊಂದಿಗೆ ಬಿಡುಗಡೆಗೊಂಡರು. ಈ ಶರತ್ತನ್ನು ಮುರಿದು ಮತ್ತೆ ಬಂಧಿತರಾಗಿ ಒಂಬತ್ತು ತಿಂಗಳ ಕಠಿಣ ಶಿಕ್ಷೆಗೆ ಒಳಗಾದರು.

## ಹ.ರಾ.ಪುರೋಹಿತ

ಹನಮಂತ ರಾಘವೇಂದ್ರ ಪುರೋಹಿತರು ೧೯೦೦ ರಲ್ಲಿ ಜನಿಸಿದರು. ಅಸಹಕಾರ ಚಳುವಳಿ ಆರಂಭಗೊಂಡಾಗ ಬಾಗಲಕೋಟೆಯಲ್ಲಿ ಶಾಲೆ ಕಲಿಯುತ್ತಿದ್ದರು. ಇವರ ಸಹೋದರ ಟಿ.ಬಿ.ಪುರೋಹಿತರು ಮುಂಬೈಯಲ್ಲಿ ಎಲ್.ಎಲ್. ಬಿ. ಓದುತ್ತಿದ್ದರು .ಅಲ್ಲಿಯ ಶಾಂತಾರಾಮ ಚಾಳಿನಲ್ಲಿ ಗಾಂಧೀಜಿ ಹಾಗೂ ಗಂಗಾಧರರಾವ ದೇಶಪಾಂಡೆಯವರು ಅಸಹಕಾರ ಚಳುವಳಿಗೆ ಕರೆ ನೀಡಿದಾಗ ಕಾಲೇಜನ್ನು ಬಹಿಷ್ಕರಿಸಿ ಬಾಗಲಕೋಟೆಗೆ ಹಿಂತಿರುಗಿದರು. ತಿಲಕ ರಾಷ್ಟ್ರೀಯ ವಿದ್ಯಾಲಯ ಎಂಬ ಶಾಲೆಯನ್ನು ಆರಂಭಿಸಿದರು. ಅಲ್ಲಿ, ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸುತ್ತಿದ್ದಾಗ ಹ.ರಾ.ಪುರೋಹಿತರು ಒಂದು ವರ್ಷ ಆ ಶಾಲೆಯಲ್ಲಿ ಕಲಿತರು.

ಗಾಂಧೀಜಿಯವರು ಹಾಗೂ ಶೌಕತ್ ಅಲಿ ಅವರು ಬಾಗಲಕೋಟೆಗೆ ಬಂದಾಗ ಊರಲ್ಲಿ ವಿದೇಶಿ ಬಟ್ಟೆಗಳ ದಹನ ಮಾಡಿದರು. ಮುಂದೆ ಹುಬ್ಬಳ್ಳಿಯ ಕರ್ಮವೀರ ಪತ್ರಿಕೆಯಲ್ಲಿ ಸಂಪಾದಕರಾಗಿ ಸೇರಿಕೊಂಡರು. ೧೯೩೦ ರಲ್ಲಿ ಬಿಸನಾಳ ಉಪ್ಪಿನ ಸತ್ಯಾಗ್ರಹ, ಅಂಕೋಲೆಯ ಕರ ನಿರಾಕರಣೆ ಸತ್ಯಾಗ್ರಹದಲ್ಲಿ ಪಾಲ್ಗೊಂಡರು.

## ಮಂಗಳವೇಡೆ ಶ್ರೀನಿವಾಸರಾಯರು

ಶ್ರೀನಿವಾಸ ಮಂಗಳವೇಡೆಯವರು ೧೮೯೫ ರಲ್ಲಿ ಜನಿಸಿದರು. ಇವರ ತಂದೆ ಸವಣೂರಿನ ನವಾಬರ ದಿವಾಣರಾಗಿದ್ದರು.ವಂಗಭಂಗ ಚಳುವಳಿಯಲ್ಲಿ ಆಲೂರ ವೆಂಕಟರಾಯರು ಸವಣೂರಿಗೆ ಪ್ರಚಾರಕ್ಕೆ ಬಂದಾಗ ಅವರ ಪ್ರಭಾವಕ್ಕೆ ಒಳಗಾದರು. ೧೯೧೩ ರಲ್ಲಿ ಹೈಸ್ಕೂಲು ಶಿಕ್ಷಣಕ್ಕಾಗಿ ಧಾರವಾಡಕ್ಕೆ ತೆರಳಿ



ಧಾರವಾಡದ ಸಪ್ತ ಋಷಿಗಳಲ್ಲಿ ಕೆಲವರಾದ ಕಡಪಾ ರಾಘವೇಂದ್ರರಾವ, ಮುದವೀಡು ಕೃಷ್ಣರಾವರ ಪ್ರಭಾವಕ್ಕೆ ಒಳಗಾದರು. ಕರ್ನಾಟಕ ಕಾಲೇಜಿನಲ್ಲಿ ಓದುವಾಗ ಕರ್ನಾಟಕ ವಿದ್ಯಾರ್ಥಿ ಬಂಧು ಮಂಡಳ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಆಲೂರರು ಸ್ಥಾಪಿಸಿದ ಕರ್ನಾಟಕ ಇತಿಹಾಸ ಮಂಡಳದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ೧೯೨೦ ರಲ್ಲಿ ನಡೆದ ನಾಗಪುರ ಕಾಂಗ್ರೆಸ್ ಅಧಿವೇಶನಲ್ಲಿ ಪಾಲ್ಗೊಂಡರು. ಇವರ ತಂದೆಯವರು ನಿವೃತ್ತರಾದ ಬಳಿಕ ಬಾಗಲಕೋಟೆಗೆ ಹಿಂತಿರುಗಿದರು. ೧೯೨೧ ರಲ್ಲಿ ಕನ್ನಡ 'ನವ ಜೀವನ' ವಾರಪತ್ರಿಕೆ ಆರಂಭಿಸಿದರು, ಗಾಂಧೀಜಿಯವರ ನವಜೀವನ, ಯಂಗ್ ಇಂಡಿಯಾಗಳಲ್ಲಿ ಬರುತ್ತಿದ್ದ ಲೇಖನಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಈ ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು.

೧೯೩೦ ರಲ್ಲಿ ಎ.ಐ.ಸಿ.ಸಿ. ಸದಸ್ಯರಾದರು. ೨೧.೩.೧೦೩೦ ರಂದು ಗುಜರಾತದಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡಿದ್ದರು. ದಂಡಿ ಯಾತ್ರೆಯನ್ನು ಕಣ್ಣಾರೆ ಕಂಡು ಸ್ಫೂರ್ತಿ ಪಡೆದರು. ಬಾಗಲಕೋಟೆಯಲ್ಲಿ ೧೩.೪.೧೯೩೦ ರಂದು ನಿಯಮ ಬಾಹಿರ ಉಪ್ಪನ್ನು ಮಾರಿ ಆರು ತಿಂಗಳ ಕಾಲ ಶಿಕ್ಷೆಗೆ ಒಳಗಾದರು. ಉಪ್ಪನ್ನು ತಯಾರಿಸಿದ ಭೀಮಜಿ ಲಿಂಗಾಪುರ ಅವರಿಗೆ ಹತ್ತು ರೂಪಾಯಿ, ಉಪ್ಪನ್ನು ಕೊಂಡ ಕೃಷ್ಣಾಜಿ ಗೋಪಾಲ ನಾಯಕರಿಗೆ ಇಪ್ಪತ್ತೈದು ರೂಪಾಯಿ ದಂಡ ವಿಧಿಸಲಾಯಿತು. ಅಕ್ಟೋಬರದಲ್ಲಿ ಶಿರೂರದಲ್ಲಿ ನಡೆದ ಅರಣ್ಯ ಸತ್ಯಾಗ್ರಹದಲ್ಲಿ ಪಾಲ್ಗೊಂಡು ಆರು ತಿಂಗಳುಗಳ ಕಾಲ ಜೈಲು ಶಿಕ್ಷೆ ಅನುಭವಿಸಿದರು. ೧೯೩೨ ರಲ್ಲಿ ಬಾಗಲಕೋಟೆಯಲ್ಲಿ ಆರನೆಯ ಪ್ರಾಂತೀಯ ರಾಜಕೀಯ ಪರಿಷತ್ತಿನ ಸ್ವಾಗತಾಧ್ಯಕ್ಷರಾದರು. ಈ ಸಭೆಗೆ ಹ.ರಾ.ಪುರೋಹಿತ, ಗುದ್ಲೆಪ್ಪ ಹಳ್ಳಿಕೇರಿ, ಚಿಣ್ಮಯಸ್ವಾಮಿ ಓಂಕಾರಮಠ ಬಾಗಲಕೋಟೆಗೆ ಬಂದಿದ್ದರು. ೨೮.೫.೧೯೩೨ ರಂದು ಮಧ್ಯಾಹ್ನ ಎರಡು ಗಂಟೆಗೆ ಪರಿಷತ್ತು ಆರಂಭವಾಯಿತು.ಅಲ್ಲಿಯವರೆಗೆ ಭೂಗತರಾಗಿದ್ದ ಮಂಗಳವೇಡೆ ಅವರ ತಂಡ ಭಾರತ ಮಾತೆಗೆ ಜಯಕಾರ ಮಾಡಲು ಸುತ್ತಲು ಅಂಗಡಿಗಳಲ್ಲಿ ಸಂತೆ ದಿನ ವ್ಯಾಪಾರಕ್ಕೆಂದು ಬಂದಂತೆ ನಟಿಸುತ್ತಿದ್ದ ನೂರಾರು ಪ್ರತಿನಿಧಿಗಳು ಹೊರ ಬಂದರು. ಒಂದು ಸಾವಿರದಷ್ಟು ಜನ ಕೂಡಿದರು. ಮಂಗಳವೇಡೆ ಅವರು ಸ್ವಾಗತ ಭಾಷಣ ಆರಂಭಿಸಿದಾಗ ಇಬ್ಬರು ಪೋಲೀಸರು ಬಂಧನಕ್ಕೆ ಮುಂದಾದರು. ವಾರೆಂಟ್ ತೋರಿಸಿ ಎಂದು ಗದರಿಸಿದಾಗ ಮೇಲಧಿಕಾರಿಗಳ

ಕಡೆಗೆ ಓಡಿ ಹೋದರು. ಸುಗುಣೇಂದ್ರ ಕೆರೂರ ಅವರು ಸಭೆಯ ಠರಾವು ಓದಿ ಮಂಜೂರು ಪಡೆದರು. ಪುರೋಹಿತರ ಅಧ್ಯಕ್ಷೀಯ ಭಾಷಣ ನಡೆಯುತ್ತಿದ್ದಂತೆ ಪೋಲೀಸ ಪಡೆ ಮುತ್ತಿಗೆ ಹಾಕಿತು, ಆದರೂ ಸಭೆ ಯಶಸ್ವಿಯಾಯಿತು. ಅಂದು ೨೦೦ ಜನ ಕಾರ್ಯಕರ್ತರ ಬಂಧನವಾಯಿತು. ಕಾಯ್ದೆಭಂಗ ಚಳುವಳಿ ತಾಜಾ ಸುದ್ದಿಗಳನ್ನು ಮುದ್ರಿಸಲು 'ಕನ್ನಡಿಗ' ಪತ್ರಿಕೆಗೆ ೨೨.೩.೧೯೩೦ ರಿಂದ ಅಸೋಸಿಯೇಟೆಡ್ ಪ್ರೆಸ್ಸಿನ ಸಂಕ್ಷಿಪ್ತ ತಂತಿಗಳನ್ನು ತರಿಸುವ ವ್ಯವಸ್ಥೆ ಮಾಡಿದರು. ೨೬.೭.೧೯೩೦ ರಂದು ಪತ್ರಿಕೆಯನ್ನು ಸರಕಾರದ ಆಜ್ಞೆಯಂತೆ ನಿಲ್ಲಿಸಬೇಕಾಯಿತು. ಮಂಗಳವೇಡೆಯವರು ಬಂಧನಕ್ಕೆ ಒಳಗಾದರು. ಬಿಡುಗಡೆಯಾದ ನಂತರ ಪತ್ರಿಕೆಯ ಪುರುಜ್ಜೀವನಕ್ಕಾಗಿ ಧಾರವಾಡಕ್ಕೆ ವರ್ಗಾಯಿಸಿದರು.೨೪.೮.೧೯೩೩ ರಿಂದ ಇದು ಆಲೂರು ವೆಂಕಟರಾಯರ ಸಂಪಾದಕತ್ವದಲ್ಲಿ ಕೆಲವು ದಿನಗಳ ಕಾಲ ನಡೆಯಿತು. ಮುಂದೆ ಆಗ ಬೆಳಗಾವಿಯಲ್ಲಿ ಪ್ರಕಟವಾಗುತ್ತಿದ್ದ 'ಸಂಯುಕ್ತ ಕರ್ನಾಟಕ' ಪತ್ರಿಕೆಯಲ್ಲಿ ವಿಲೀನಗೊಂಡಿತು. 'ಇದರಲ್ಲಿ ಕನ್ನಡಿಗವೂ ಸಮಾವೇಶವಾಗಿದೆ' ಎಂದು ಸಂಯುಕ್ತ ಕರ್ನಾಟಕದ ಶೀರ್ಷಿಕೆಯ ಜೊತೆ ಅನೇಕ ವರ್ಷ ಮುದ್ರಿಸಲಾಯಿತು.

೧೯೪೨ ರ ಚಲೇಜಾವ್ ಚಳುವಳಿಯಲ್ಲಿ ಚನ್ನಬಸಪ್ಪ ಅಂಬಲಿ ಮುಂತಾದ ನಾಯಕರಿಗೆ ಆಶ್ರಯ ನೀಡಿದರು. ಈ ವಿಚಾರವಾಗಿ ಪೋಲೀಸರಿಂದ ಬಂಧಿಸಲ್ಪಟ್ಟರು. ಚಳುವಳಿಯಲ್ಲಿ ನಾಲ್ಕು ಬಾರಿ ಮೂವತ್ತೆರಡು ತಿಂಗಳುಗಳ ಕಾಲ ಜೈಲುವಾಸ ಅನುಭವಿಸಿದರು.

**ಸಮಾರೋಪ**

ಐತಿಹಾಸಿಕ ಹಿನ್ನೆಲೆಯುಳ್ಳ ಬಾಗಲಕೋಟೆ ನಗರವು ರಾಷ್ಟ್ರೀಯ ಚಳುವಳಿಯಲ್ಲಿ ತನ್ನದೇ ಆದ ನಿರ್ಣಾಯಕ ಪಾತ್ರವಹಿಸಿದೆ. ಆರಂಭದಲ್ಲಿ ಇಲ್ಲಿನ ಯುವಕರು ತಿಲಕರ ಪ್ರಭಾವಕ್ಕೆ ಒಳಗಾಗಿ ರಾಷ್ಟ್ರೀಯತೆಯ ಕಿಡಿಯನ್ನು ಹೊತ್ತಿಸಿ ಸ್ವದೇಶಿ ಚಳುವಳಿಯಲ್ಲಿ ಪಾಲ್ಗೊಂಡು ಕ್ರಾಂತಿಕಾರಿಗಳನ್ನು ಬೆಂಬಲಿಸಿದರು. ನಂತರ ಗಾಂಧೀಜಿಯವರು ರಾಷ್ಟ್ರೀಯ ಆಂದೋಲನದ ನಾಯಕತ್ವವನ್ನು ವಹಿಸಿದಾಗ ಅವರ ಪ್ರಭಾವಕ್ಕೆ ಒಳಗಾಗಿ ಸತ್ಯ, ಅಹಿಂಸೆ ತತ್ವಗಳ ಆಧಾರದ ಮೇಲೆ ಹೋರಾಟ ಮಾಡಿ ದೇಶಕ್ಕಾಗಿ ತನು, ಮನ, ಧನವನ್ನು ಅರ್ಪಿಸಿ ೧೯೪೭ ಆಗಸ್ಟ್ ೧೫ ರಂದು ದೇಶಕ್ಕೆ ಸ್ವಾತಂತ್ರ್ಯ



ತಂದುಕೊಡುವಲ್ಲಿ ಮಹತ್ವದ ಪಾತ್ರ ವಹಿಸಿದರು. ಬಾಗಲಕೋಟೆಯಲ್ಲಿ ಮುಳುಗಡೆಯಾಗಿ ನವನಗರದಲ್ಲಿ ಯಥಾವತ್ತಾಗಿ ಪುನರ್ ನಿರ್ಮಾಣಗೊಂಡಿರುವ ಭಾರತ ಸೇವಾದಳ ಕಟ್ಟಡ ಹಾಗೂ ಹಳೆ ಬಾಗಲಕೋಟೆಯಲ್ಲಿರುವ ವಲ್ಲಭಬಾಯಿ ಪಟೇಲರು ಭಾಷಣ ಮಾಡಲು ನಿರ್ಮಿಸಿದ 'ವಲ್ಲಭಬಾಯಿ ಚೌಕ' ಇಂದಿಗೂ ಸ್ವಾತಂತ್ರ್ಯ ಹೋರಾಟದ ನೆನಪಿನ ಸ್ಮಾರಕಗಳಾಗಿ ಉಳಿದಿವೆ. ನಮ್ಮ ಹಿಂದಿನವರ ತ್ಯಾಗ, ಬಲಿದಾನ ಮುಂದಿನ ಪೀಳಿಗೆಗೆ ಆದರ್ಶಪ್ರಾಯವಾದುದು.

❑

# ಅನುಬಂಧ ೧

# ಅಪ್ರತಿಮ ದೇಶಭಕ್ತ, ಸ್ವಾತಂತ್ರ್ಯ ಹೋರಾಟಗಾರ: ಶ್ರೀ ಪರಪ್ಪ ಸಂಗಪ್ಪ ಸಜ್ಜನ

**– ಯೋಗೇಶ ಜಿ ಲಮಾಣಿ**

**ಅಮೀನಗಡ**

ಬಾಗಲಕೋಟ ತಾಲೂಕಿನ ಬೇವೂರು, ಹಲವಾರು ದೇಶಭಕ್ತರಿಗೆ, ದಾರ್ಶನಿಕರಿಗೆ, ಸಂಗೀತಕಾರರಿಗೆ, ಕಲಾವಿದರಿಗೆ, ಸ್ವಾತಂತ್ರ್ಯ ಹೋರಾಟಗಾರರಿಗೆ ಜನ್ಮ ನೀಡಿದ ಪವಿತ್ರ ಭೂಮಿಯಾಗಿದೆ. ಈ ಮಣ್ಣಿನ ಗುಣವೇ ಅಂತಹದ್ದು. ಮಹಾದಂಡನಾಯಕರಾಗಿ ಸೇವೆಗೈದ ಜಿ.ಜಿ. ಬೇವೂರಕರ, ಖ್ಯಾತ ರಂಗಕರ್ಮಿ ಏಣಗಿ ಬಾಳಪ್ಪನವರ ಗುರುಗಳಾದ ಹಾಗೂ ಖ್ಯಾತ ಸಂಗೀತ ವಿದ್ವಾಂಸರು, ಕಲಾವಿದರಾದ, ಬೇವೂರ ಬಾದಶಹ, ದೇಶಭಕ್ತ ಸ್ವಾತಂತ್ರ್ಯ ಹೋರಾಟಗಾರರಾದ ಪರಪ್ಪ ಸಂಗಪ್ಪ ಸಜ್ಜನ, ಕಂಬಪ್ಪ ಚಲವಾದಿ, ಸಾಹಿತಿ ಶಿಕ್ಷಕ ಹನಮಂತ ಗ. ಜೋಷಿ ಹೀಗೆ ಹಲವಾರು ಸಾಧಕರು ಹುಟ್ಟಿ ಬೆಳೆದದ್ದು ಇದೇ ಪುಣ್ಯಭೂಮಿಯಲ್ಲಿ. ಬೇವೂರಿನ ಕೀರ್ತಿಪತಾಕೆಯನ್ನು ದೇಶದೆಲ್ಲೆಡೆ ಪಸರಿಸಿದ ಹೆಮ್ಮೆಯ ಅಪ್ರತಿಮ ಸಾಧಕರು ಇವರು.

ಸ್ವಾತಂತ್ರ್ಯ ಹೋರಾಟಗಾರರು, ಅಪ್ರತಿಮ ದೇಶಭಕ್ತ, ಗಾಂಧೀವಾದಿಗಳು, ಶಿಕ್ಷಣ ಪ್ರೇಮಿಗಳು ಮಾನವೀಯ ಕಳಕಳಿಯ, ಸರಳ ಸಜ್ಜನಿಕೆಯ ಅಪರೂಪದ ವ್ಯಕ್ತಿತ್ವದ ಶ್ರೀ ಪರಪ್ಪ ಸಂಗಪ್ಪ ಸಜ್ಜನ ಅವರನ್ನು ನೆನಪಿಸುವ ಒಂದು ಸುದಿನ. ಅವರು ಬಾಳಿದ ರೀತಿ, ಸ್ವಾತಂತ್ರ್ಯ ಪೂರ್ವ ಹೋರಾಟದಲ್ಲಿ ಅವರು ಗೈದಂತಹ ಕಾರ್ಯ, ಸಮಾಜ ಸುಧಾರಣೆಯ ತುಡಿತ, ಸಾಮರಸ್ಯದ ಭಾವ ನಿಜಕ್ಕೂ



ಶ್ಲಾಘನೀಯವಾಗಿರುವಂತಹದ್ದು, ಅನುಕರಣೀಯವಾಗಿದೆ, ಮಾದರಿಯೂ ಹೌದು.

## ಬಾಲ್ಯದ ಜೀವನ

ಬೇವೂರಿನ ಬಸಪ್ಪ ಹಾಗೂ ಧರ್ಮವ್ವರ ಪುಣ್ಯ ಉದರದಲ್ಲಿ ೧೯೦೪ ರಲ್ಲಿ ಜನಿಸಿದರು. ಮುಂದೆ ೧೯೨೮ ರಲ್ಲಿ ಸಂಬಂಧಿಗಳಾದ ಸಂಗಪ್ಪ ಅವರಿಗೆ ಮಕ್ಕಳಿಲ್ಲದ ಕಾರಣ ಪರಪ್ಪ ಅವರನ್ನು ದತ್ತು ಪಡೆದುಕೊಳ್ಳುತ್ತಾರೆ. ಪರಪ್ಪ ಸಂಗಪ್ಪ ಸಜ್ಜನ ಅವರು ಸುಸಂಸ್ಕೃತ ಮನೆತನದಲ್ಲಿ ಬೆಳೆದವರು. ಕೇವಲ ೩ ನೇ ತರಗತಿಯವರೆಗೆ ಕಲಿತ ಪರಪ್ಪನವರಿಗೆ ಸಾಹಿತ್ಯ ಓದುವ ಅಭಿರುಚಿ, ಪುಸ್ತಕ ಪ್ರೀತಿ ಮೆಚ್ಚುವಂತಹದ್ದು. ಆ ಹಂತದಲ್ಲಿಯೇ ಅವರು ಗಳಗನಾಥರ ಕಮಲಕುಮಾರಿ, ಮರಾಠಾ ಅಭ್ಯುದಯ, ಛತ್ರಪತಿ ಶಿವಾಜಿ, ಕನ್ನಡಿಗರ ಕರ್ಮಕಥೆ, ಕುಮುದಿನಿ, ಮಾಧವ ಕರುಣಾ ವಿಲಾಸ, ಕ್ಷಾತ್ರ ತೇಜ, ತಿಲೋತ್ತಮೆ ಮುಂತಾದ ಕೃತಿಗಳನ್ನು ಓದುತ್ತಿದ್ದರು. ಕೃತಿಗಳಲ್ಲಿನ ಧೀರತ್ವ, ಶೂರತನ, ದೇಶಭಕ್ತಿ ಎಲ್ಲವೂ ಅವರ ಮೇಲೆ ಗಾಢವಾದ ಪರಿಣಾಮ ಬೀರಲಾರಂಭಿಸಿದವು. "ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು" ಎನ್ನುವಂತೆ ಬಾಲಕ ಪರಪ್ಪನವರು ಬೆಳೆದಂತೆ ಮಾನವೀಯ ಮೌಲ್ಯಗಳನ್ನು, ಗಾಂಧೀಜಿಯವರ 'ಸರಳ ಜೀವನ, ಉನ್ನತ ವಿಚಾರವನ್ನು' ಅಳವಡಿಸಿಕೊಂಡು ಬೆಳೆದರು.

"ದೇಶದ ಅಭಿವೃದ್ಧಿ ಕುಂಠಿತವಾಗಲು ಪರತಂತ್ರ ವ್ಯವಸ್ಥೆಯೇ ಕಾರಣ" ಎಂಬುದನ್ನು ಮನಗಂಡು, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಬೇಕು ಎಂಬ ಸಂಕಲ್ಪ ಅವಾಗಲೇ ಮಾಡಿದ್ದರು. ಅಂತಹ ಅದಮ್ಯ ಕಳಕಳಿ ಅದಾಗಲೇ ಚಿಗುರೊಡೆದಿತ್ತು. ಮುಂದೆ ಆದರ್ಶ ವ್ಯಕ್ತಿಯಾಗಿ ಬೆಳೆಯಲು ಅವು ಪ್ರೇರೇಪಿಸಿದವು. ಮನೆಯಲ್ಲಿ ಶ್ರೀಮಂತಿಕೆಯಿದ್ದರೂ ಯಾವತ್ತೂ ಬೀಗಲಿಲ್ಲ. ಸರಳ ಜೀವನ ಅವರ ಮೂಲಮಂತ್ರವಾಯಿತು. ದೇಹದ ಕಣಕಣಗಳಲ್ಲಿ ದೇಶಭಕ್ತಿ ಅಚಲವಾಗುತ್ತಾ ಹೋಯಿತು.

ಫೋನ್, ದೂರದರ್ಶನ, ಮೊಬೈಲ್‌ಗಳಿಲ್ಲದ ಕಾಲವದು. ಮಾಧ್ಯಮಗಳು ಅಷ್ಟೊಂದು ಬೆಳವಣಿಗೆ ಇಲ್ಲದ ಅಂದು ಪತ್ರಿಕೆಗಳೇ ಎಲ್ಲರ ಸಂವಹನ ಮಾಧ್ಯಮವಾಗಿತ್ತು. ಅದರ ಮೂಲಕವೇ ಎಲ್ಲವನ್ನು ತಿಳಿದುಕೊಳ್ಳಬಹುದಾಗಿತ್ತು. ಆ ಕಾಲದಲ್ಲಿ ಪ್ರಕಟವಾಗುತ್ತಿದ್ದ ಹಾಗೂ ರಾಷ್ಟ್ರೀಯ ಚಳುವಳಿಗೆ ಪ್ರೇರಣೆಯಾಗಿದ್ದ

ಅನೇಕ ಪತ್ರಿಕೆಗಳನ್ನು ಅವರು ತರಿಸಿಕೊಂಡು ಓದುತ್ತಿದ್ದರು. ಸಂಯುಕ್ತ ಕರ್ನಾಟಕ, ತಾಯಿನಾಡು, ವೀರಕೇಸರಿ, ಕರ್ಮವೀರ, ವಿಜಯಪುರದಿಂದ ಪ್ರಕಟಗೊಳ್ಳುತ್ತಿದ್ದ ಕರ್ನಾಟಕ ಗತವೈಭವ, ಜಯ ಕರ್ನಾಟಕ ಮಾಸ ಪತ್ರಿಕೆ, ಎಲ್ಲವೂ ಅವರಿಗೆ ರಾಷ್ಟ್ರಪ್ರಜ್ಞೆಯನ್ನು ಹೆಚ್ಚಿಸುವುದರೊಂದಿಗೆ ಅವರ ಮೇಲೆ ತೀಕ್ಷ್ಣವಾದ ಪ್ರಭಾವ ಬೀರಿ ನಾಡು ನುಡಿಯ ಬಗ್ಗೆ ಅಪಾರ ಅಭಿಮಾನ ಹುಟ್ಟಿಸಿದವು. ಹದಿನೆಂಟು ವಯಸ್ಸಿನ ತರುಣರಾದ ಪರಪ್ಪನವರಿಗೆ ಕರ್ನಾಟಕದ ಗಾಂಧಿ ಎಂದೇ ಪ್ರಸಿದ್ಧರಾದ ಹರ್ಡೇಕರ್ ಮಂಜಪ್ಪನವರ ಬರಹ ಭಾಷಣಗಳಿಂದ ಪ್ರಭಾವಿತರಾಗಿ ಪ್ರಗತಿಪರ ವಿಚಾರಗಳತ್ತ ಗಮನಹರಿಸತೊಡಗಿದರು. ಬಾಗಲಕೋಟದ ಸೇವಾದಲದ ಮುಖ್ಯ ಕೇಂದ್ರ ಸ್ಥಾಪಿಸಿದ ಡಾ. ನಾ.ಸು ಹರ್ಡೀಕರರವರ ಜೊತೆಗೆ ಸಂಪರ್ಕ ಬೆಳೆಸಿಕೊಂಡರು. ಇದರಿಂದ ಮುಂದೆ ಹಲವಾರು ರಾಷ್ಟ್ರೀಯ ಗಣ್ಯ ನಾಯಕರ ಪರಿಚಯವಾಗಲು ಅವರಿಗೆ ರಹದಾರಿ ಒದಗಿಸಿತು.

## ದೇಶಿ ಉಡುಪು, ದೇಶಪ್ರೇಮ

ಪರಪ್ಪನವರು ಸದಾ ಹಸನ್ಮುಖಿ, ಸ್ನೇಹಜೀವಿಗಳು. ಎತ್ತರವಾದ ನಿಲುವು, ಸದೃಢವಾದ ದೇಹ, ತಲೆಯ ಮೇಲೊಂದು ಗಾಂಧಿ ಟೊಪ್ಪಿಗೆ, ಖಾದಿಧಾರಿಗಳಾದ ಅವರನ್ನು ನೋಡುವುದೇ ಖುಷಿ ಎಂದು ಈಗಲೂ ಅವರನ್ನು ಹತ್ತಿರದಿಂದ ಬಲ್ಲವರು ಹೇಳುತ್ತಾರೆ. ಅವರು ದೇಶಿ ಉಡುಪನ್ನು ಪ್ರೀತಿಸುತ್ತಿದ್ದರು, ಪೋಷಿಸುತ್ತಿದ್ದರು ಜೊತೆಗೆ ಅವರ ಮುಂದಾಲೋಚನೆ ಮೆಚ್ಚುವಂತಹದ್ದು ಎಂಬುದಕ್ಕೆ ಈ ಒಂದು ಘಟನೆಯೇ ಸಾಕ್ಷಿ ಎನ್ನಬಹುದು.

ಒಂದು ಸಲ ಅವರು ಖಾದಿ ಬಟ್ಟೆಯನ್ನು ಧರಿಸಿಕೊಂಡು, ಸ್ನೇಹಿತ ಭೀಮಪ್ಪ ಕೇಶಣ್ಣವರ ಅವರೊಂದಿಗೆ ೧೯೨೪ ರಲ್ಲಿ ಬೆಳಗಾವಿಯ ಕಾಂಗ್ರೆಸ್ ಅಧಿವೇಶನಕ್ಕೆ ಹೋಗಿರುತ್ತಾರೆ. ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಆ ಅಧಿವೇಶನದಲ್ಲಿ ದೇಶೀಯ ಉಡುಗೆಗಳನ್ನು ಧರಿಸುವುದು ಹಾಗೂ ಉತ್ತೇಜಿಸುವುದರ ಜೊತೆಗೆ ವಿದೇಶಿ ಬಟ್ಟೆಗಳನ್ನು ತ್ಯಜಿಸಬೇಕು ಎಂಬ ಸರ್ವಸಮ್ಮತವಾದ, ಒಕ್ಕೊರಲಿನ ನಿರ್ಣಯ ಮಂಡನೆಯಾಗುತ್ತದೆ. ಮೊದಲೇ ಖಾದಿಧಾರಿಗಳಾದ ಪರಪ್ಪನವರು ಅಂದು ಎಲ್ಲರ ಪ್ರಶಂಸೆಗೆ ಪಾತ್ರರಾಗುತ್ತಾರೆ. ಅವರ ದೂರದೃಷ್ಟಿ, ದೇಶೀಯತೆ, ದೇಶಪ್ರೇಮ ನಿಜಕ್ಕೂ ಮೆಚ್ಚುವಂತಹದ್ದು.



ಅಲ್ಲಿ ಗಾಂಧೀಜಿಯವರು ಹಾಗೂ ಇನ್ನಿತರ ಸ್ವಾತಂತ್ರ್ಯ ಹೋರಾಟಗಾರರ ಮಾತಿನಿಂದ ಮತ್ತಷ್ಟು ಸ್ಫೂರ್ತಿ ಪಡೆದುಕೊಂಡು ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಲು ಹಾಗೂ ದೇಶಿ ವಸ್ತುಗಳ ಬಳಕೆಯ ವಿಷಯದಲ್ಲಿ ಅವರು ಮತ್ತಷ್ಟು ಶ್ರದ್ಧೆ ಹೊಂದುತ್ತಾರೆ. ಅಷ್ಟೆ ಅಲ್ಲದೇ, ಆಗಿನ ಕಾಲದಲ್ಲಿ ಪ್ರಸಿದ್ದರಾಗಿದ್ದ, ದೇಶಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡಿದ ಕೌಜಲಗಿ ಹನುಮಂತರಾಯರು ಖಾದಿ ಪ್ರಚಾರಕ್ಕಾಗಿ ಬೇವೂರಿಗೆ ಆಗಮಿಸಿದಾಗ, ಅವರ ಪ್ರೇರಣೆಯಂತೆ ಬೇವೂರು ಹಾಗೂ ಸುತ್ತಮುತ್ತಲಿನ ಹಳ್ಳಿಗಳಾದ ಬೆನಕಟ್ಟಿ, ಭೈರಮಟ್ಟಿಗೆ ತೆರಳಿ ಹಂಜಿ ಮಾಡಿಸುವುದು, ಹಂಜಿ ಕೊಟ್ಟು ನೂಲು ತೆಗೆಸುವುದು ಹಾಗೂ ನೂಲನ್ನು ಖರೀದಿಸುವುದು ಹೀಗೆ ಖಾದಿ ಪ್ರಚಾರ, ಪ್ರಸಾರದಲ್ಲಿ ಪಾಲ್ಗೊಳ್ಳುತ್ತಾರೆ. ಗುಡಿ ಕೈಗಾರಿಕೆಯ ಮೂಲಕ ಸ್ವಾವಲಂಬಿ ಭಾರತದ ಕನಸನ್ನು ಅವರು ಒಳಗೊಂಡಿದ್ದರು. ಖಾದಿ ಬಟ್ಟೆಯ ವ್ಯಾಮೋಹ, ದೇಶೀಯತೆಯನ್ನು ಉಳಿಸುವ, ಬೆಳೆಸುವ ದೇಶಭಕ್ತ ಅವರಾಗಿದ್ದರು ಎಂಬುದಕ್ಕೆ ಇದು ನಿದರ್ಶನವಾಗಿದೆ.

## ಸಾಹಿತ್ಯ ಪ್ರೇಮಿ

ಪರಪ್ಪನವರು ಸಾಹಿತ್ಯ ರಚನೆಕಾರರಲ್ಲದಿದ್ದರೂ ಉತ್ತಮ ಓದುಗರಾಗಿದ್ದರು. ಅವರಲ್ಲಿ ಜ್ಞಾನದ ಹಸಿವು ನಿರಂತರವಾಗಿತ್ತು. ಬಸವಣ್ಣನವರ ವಾಣಿಯಂತೆ "ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ" ಎಂಬಂತೆ ಪ್ರತಿಯೊಬ್ಬರೂ ಜ್ಞಾನವಂತರಾಗಿ ಸಮಾಜದಲ್ಲಿರುವ ಅಂಧತ್ವವನ್ನು ತೊಡೆಯಬೇಕು. ಸಂಸ್ಕಾರಯುತ ಜೀವನ ನಡೆಸಬೇಕು ಎಂಬ ಮಹದಾಸೆ ಹೊಂದಿದ್ದರು. ಆಗತಾನೇ ಬೇವೂರಿಗೆ ವರ್ಗವಾಗಿ ಆಗಮಿಸಿದ ಪ್ರಾಥಮಿಕ ಶಾಲಾ ಶಿಕ್ಷಕ, ಸಾಹಿತ್ಯ ಚಿಂತಕರಾದ ಲಕ್ಷ್ಮಣ ಗುಮಾಸ್ತೆ ಅವರೊಂದಿಗೆ ಗೆಳೆತನ ಮಾಡಿಕೊಂಡು, ಆ ಕಾಲದಲ್ಲಿ ಪ್ರಚಲಿತರಾದ ಹಲಸಂಗಿಯ ಗೆಳೆಯರ ಬಳಗದ ಚೆನ್ನಮಲ್ಲಪ್ಪನವರನ್ನು (ಮಧುರಚೆನ್ನ), ಧಾರವಾಡದ ಮೇರು ಸಾಹಿತಿ ದ.ರಾ. ಬೇಂದ್ರೆಯವರನ್ನು ಬೇವೂರಿಗೆ ಕರೆಸಿ ಅವರಿಂದ ಸಾಹಿತ್ಯದ ಚಿಂತನ ಮಂಥನ, ಚರ್ಚಾಗೋಷ್ಠಿ ನಡೆಸುತ್ತಿದ್ದರು. ಆ ಮೂಲಕ ಸಾಹಿತ್ಯ ಮತ್ತು ಸಾಹಿತಿಗಳನ್ನು ಪೋಷಿಸುತ್ತಿದ್ದರು. ಮಹಾ ದಂಡನಾಯಕರಾದ ಜನರಲ್ ಜಿ. ಜಿ. ಬೇವೂರ ಅವರೊಂದಿಗೆ ನಿರಂತರ ಸಂಪರ್ಕದಲ್ಲಿರುತ್ತಿದ್ದರು. ಅಷ್ಟೊಂದು ಸ್ನೇಹಪರವಾದ ಒಡನಾಟ ಇಬ್ಬರಲ್ಲಿಯೂ ಇತ್ತು.

ಹಲವಾರು ರಾಜಕೀಯ ನಾಯಕರೂ ಸಹ ಬೇವೂರಿಗೆ ಆಗಮಿಸಿ ಪರಪ್ಪನವರನ್ನು ಭೇಟಿಯಾಗದೇ ಹೋಗುತ್ತಿರಲಿಲ್ಲ. ೧೯೩೭ ರಲ್ಲಿ ಎಸ್. ಆರ್. ಕಂಠಿಯವರು ಅಸೆಂಬ್ಲಿ ಚುನಾವಣೆಗೆ ನಿಂತಾಗ ಅವರ ಬೆಂಬಲಕ್ಕೆ ನಿಂತರು. ಅವರು ಆರಿಸಿಯೂ ಬಂದರು. ಹೀಗಾಗಿ ಅವರ ಆಪ್ತತೆ ಹೆಚ್ಚಾಯಿತು. ಚೆನ್ನಬಸಪ್ಪ ಅಂಬಲಿ, ಎಸ್. ಆರ್. ಕಂಠಿ ಯಂತಹ ಅನೇಕ ರಾಜಕೀಯ ನಾಯಕರು ಹಾಗೂ ಮುದುವೀಡು ಕೃಷ್ಣರಾಯರು, ಡಾ. ನಾ.ಸು. ಹರ್ಡಿಕರ್, ಗಂಗಾಧರರಾವ ದೇಶಪಾಂಡೆ, ಗುರುರಾವ್ ಜೋರಾಪೂರ ರಂತಹ ಅಪ್ರತಿಮ ದೇಶಭಕ್ತರು ಬೇವೂರಿಗೆ ಬಂದಾಗ ಅವರಿಂದ ಭಾಷಣ ಮಾಡಿಸುವುದರಿಂದ ಹಿಡಿದು, ಊಟದ ಎಲ್ಲ ವ್ಯವಸ್ಥೆಯನ್ನು ಪರಪ್ಪನವರೇ ವಹಿಸುತ್ತಿದ್ದರು. ಅವರ ಧರ್ಮಪತ್ನಿ ಸಂಗವ್ವನವರೂ ಸಹ ಬಂದ ಅತಿಥಿಗಳಿಗೆ ಉತ್ತರ ಕರ್ನಾಟಕದ ಪ್ರಸಿದ್ಧ ಸಜ್ಜಿ ರೊಟ್ಟಿ, ಕಲ್ಲಾನ ಹಿಂಡಿ, ಚಟ್ನಿ, ಬೆಣ್ಣೆ ಮೊಸರು, ಬೇಸನ್ ಉಂಡಿ, ಕಾಳು ಪಲ್ಯ ಹೀಗೆ ತರತರದ ರುಚಿಯಾದ ಭೋಜನವನ್ನು ಬಡಿಸುತ್ತಿದ್ದರು. ಹಗಲಿರುಳೆನ್ನದೇ 'ಅತಿಥಿ ದೇವೋ ಭವ' ಎಂಬಂತೆ ಕಾಯಾ ವಾಚಾ ಮನಸಾ ಅತಿಥಿಗಳ ಹಸಿವನ್ನು ಹಿಂಗಿಸುತ್ತಿದ್ದರು.

**ಅಸಹಕಾರ ಚಳುವಳಿಯಲ್ಲಿ ಭಾಗಿ**

ಮತ್ತೊಂದೆಡೆ ಬ್ರಿಟಿಷರ ದುರಾಡಳಿತ ಅಧಿಕವಾಗತೊಡಗಿತು. ಭಾರತೀಯರ ಮೇಲಿನ ನಿರಂತರ ಶೋಷಣೆಗಳು, ತಾರತಮ್ಯ ನೀತಿಗಳು, ಅಸಮರ್ಪಕ ತೆರಿಗೆ ಪದ್ಧತಿಗಳು, ರೌಲತ್ ಕಾಯಿದೆ, ಜಲಿಯನ್ ವಾಲಾಬಾಗ್ ದುರಂತ ಈ ಎಲ್ಲ ಘಟನೆಗಳಿಂದ ರೋಸಿಹೋದ ಭಾರತೀಯರು ಸೂಕ್ತ ಪ್ರತ್ಯುತ್ತರ ನೀಡಲು ಮುಂದಾದರು. ಗಾಂಧೀಜಿಯವರು ಬ್ರಿಟಿಷರ ವಿರುದ್ಧ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿದರು. ದೇಶದಲ್ಲೆಡೆ ಸಂಚರಿಸಿ ಅಸಹಕಾರ ಚಳುವಳಿಗೆ ಕರೆ ನೀಡಿದರು. ಪ್ರತಿ ಗ್ರಾಮಗಳಲ್ಲಿಯೂ ಚಳುವಳಿಗಳು ಪ್ರಾರಂಭವಾದವು. ಬ್ರಿಟಿಷರ ಕಾಯಿದೆಗಳನ್ನು ಮುರಿಯುವ, ಅಡ್ಡಿಪಡಿಸುವ ಕೆಲಸಗಳು ನಡೆದವು. ಕರ ವಸೂಲಾತಿ ನಿಯಮದ ವಿರುದ್ಧ ತಕರಾರು ತೆಗೆದದ್ದೂ ಇದೆ. ಅಂತೆಯೇ ಪರಪ್ಪನವರು, ಕಲೆಕ್ಟರ್ ಹಾಗೂ ಮಾಮಲೇದಾರ ಸಾಹೇಬರಿಗೆ ಹಪ್ತೆ ತಹಬೂಬ ಇಡಬೇಕೆಂದು ತಕರಾರು ಅರ್ಜಿ ನೀಡಿ ಯಶಸ್ವಿಯಾಗಿದ್ದರು. ಪರಿಣಾಮವಾಗಿ ನಾಲ್ಕರಿಂದ ಆರು ಸಾರಿ ಹಪ್ತೆ ತಹಬೂಬ ಆಗಿ ಮುಂದೆ ಸೂಟಾದ ಉದಾಹರಣೆಗಳಿವೆ.



೧೯೪೧ ರ ಸಂದರ್ಭದಲ್ಲಿ ದೇಶದಾದ್ಯಂತ ಚಳುವಳಿ ತೀವ್ರ ಸ್ವರೂಪ ಪಡೆದುಕೊಳ್ಳತೊಡಗಿತು. ಅದರಂತೆಯೇ ಬೇವೂರಿನಲ್ಲಿಯೂ ಅನೇಕರು ಚಳುವಳಿಯಲ್ಲಿ ಪಾಲ್ಗೊಳ್ಳತೊಡಗಿದರು. ಚಳುವಳಿಯ ನೇತೃತ್ವವನ್ನು ಪರಪ್ಪನವರೇ ವಹಿಸಿಕೊಂಡಿದ್ದರು. ಬೇವೂರಿನ ಖ್ಯಾತ ಲಾವಣಿಕಾರ, ಸ್ವಾತಂತ್ರ್ಯಹೋರಾಟಗಾರ ಕಂಬಪ್ಪ ಚಲವಾದಿ, ಹನಮಂತ ಜೋಷಿಯಂತಹ ದೇಶಭಕ್ತರು ಚಳುವಳಿಯಲ್ಲಿ ಪಾಲ್ಗೊಂಡರು. ಆ ಕಾಲದಲ್ಲಿ ಬೇವೂರಿನಿಂದ ಅಂಚೆ ಚೀಲಗಳನ್ನು ಕಡ್ಲಿಮಟ್ಟಿ ರೇಲ್ವೆ ಸ್ಟೇಶನ್ನಿಗೆ ಮುಟ್ಟಿಸಿ ಬರಬೇಕಾಗಿತ್ತು. ಅಲ್ಲಿ ಬರುವ ರೈಲಿನ ಸಹಾಯದಿಂದ ಬೇರೆ ಬೇರೆ ಕಡೆಗೆ ಅಂಚೆ ಕಾರ್ಡುಗಳನ್ನು ಮುಟ್ಟಿಸುವ ವ್ಯವಸ್ಥೆ ಇತ್ತು. ಈ ಕೆಲಸಕ್ಕೆ ಲಕ್ಷ್ಮಪ್ಪ ಬಾರಕೇರ ಎಂಬಾತನನ್ನು ನೇಮಿಸಲಾಗಿತ್ತು. 'ದೇಶದೆಲ್ಲೆಡೆ ಅಸಹಕಾರ ಚಳುವಳಿ ನಡೆಯುತ್ತಿರುವಾಗ ಬ್ರಿಟಿಷ್ ಸರಕಾರದ ಕೆಲಸಗಳು ಸರಿಯಾಗಿ ನಡೆಯುವುದು ಬೇಡ ಎಲ್ಲರೂ ಒಗ್ಗಟ್ಟಾಗಿ ಅಸಹಕಾರ ಚಳುವಳಿಯನ್ನು ಬೆಂಬಲಿಸೋಣ' ಎಂಬ ತೀರ್ಮಾನ ಪ್ರಕಟವಾದಾಗ ಅಂಚೆ ಕೆಲಸದ 'ಲಕ್ಷ್ಮಪ್ಪ ಬಾರಕೇರ' ಎಂಬುವವನನ್ನು ಒಂದು ದಿನ ಪೂರ್ತಿ ಅಂಚೆ ಚೀಲದೊಂದಿಗೆ ಬಂಧಿಸಿಡಲಾಯಿತು. ಈ ಮೂಲಕ ಬ್ರಿಟಿಷರ ದುರಾಡಳಿತದ ವಿರುದ್ಧ, ಅವರಿಗೆ ಬಿಸಿ ಮುಟ್ಟಿಸುವ ಕಾರ್ಯದಲ್ಲಿ ಸಂಪೂರ್ಣವಾಗಿ ಭಾಗವಹಿಸತೊಡಗಿದರು. ಬೇವೂರಿನಂತೆಯೇ ಜಿಲ್ಲೆಯ ಎಲ್ಲ ಭಾಗಗಳಲ್ಲಿಯೂ ಚಳುವಳಿಯು ಪ್ರಾರಂಭವಾಗಿತ್ತು.

ಈ ಸಂದರ್ಭದಲ್ಲಿ ಚಳುವಳಿ ವಿಫಲ ಮಾಡುವ ಅನೇಕ ಪ್ರಯತ್ನಗಳು ಬ್ರಿಟಿಷರಿಂದ ನಡೆದವು. ಅನೇಕ ನಾಯಕರೂ ಬಂಧನಕ್ಕೊಳಗಾದರು. ಇವೆಲ್ಲದಕ್ಕೂ ಬಗ್ಗದೇ ಗಾಂಧೀಜಿಯವರು ವೈಯಕ್ತಿಕ ಸತ್ಯಾಗ್ರಹ ಹಾಗೂ ಚಳುವಳಿಗಳಲ್ಲಿ ಭಾಗವಹಿಸಲು ಮತ್ತೆ ಕರೆ ನೀಡುತ್ತಾರೆ. 'ದಾಸ್ಯದ ಅರಮನೆಗಿಂತ ಸ್ವಾತಂತ್ರ್ಯದ ಸೆರೆಮನೆ ಲೇಸು' ಎಂಬ ಕೂಗು ಎಲ್ಲೆಲ್ಲೂ ಮೊಳಗಿತು. ಗಾಂಧೀಜಿಯವರ ಆಣತಿಯಂತೆ ಬೇವೂರಿನ ಪ್ರಮುಖ ಬೀದಿಗಳಲ್ಲಿ ಅಸಂಖ್ಯಾತ ಜನರು ನೆರೆದರು. ಬ್ರಿಟಿಷರ ವಿರುದ್ಧ ಘೋಷಣೆಗಳು ಮೊಳಗತೊಡಗಿದವು. ಸ್ವಾತಂತ್ರ್ಯದ ಕಿಚ್ಚು ರಿಂಗಣಿಸತೊಡಗಿತು. ಬ್ರಿಟಿಷ್ ಸರಕಾರದ ವಿರುದ್ಧ ಚಳುವಳಿಯನ್ನು ನಡೆಸಿದರ ಪ್ರಯುಕ್ತ ಹಾಗೂ ಬ್ರಿಟಿಷರ ವಿರುದ್ಧ ಘೋಷಣೆಗಳು ಚಳುವಳಿಯಲ್ಲಿ ವ್ಯಕ್ತವಾದ್ದರಿಂದ, ಚಳುವಳಿಯ ನೇತೃತ್ವ ವಹಿಸಿದ್ದ ಪರಪ್ಪನವರನ್ನು ಬಂಧಿಸಲು ಮುಂದಾದರು. ಬೇವೂರಿನ ಹುಚ್ಚಪ್ಪಯ್ಯನ ಮಠದ ಹತ್ತಿರವಿರುವ

ಅಗಸಿ ಕಟ್ಟೆಯ ಹತ್ತಿರ ಬ್ರಿಟಿಷ್ ಸರಕಾರ ಅವರನ್ನು ಬಂಧಿಸಿ ಮಹಾರಾಷ್ಟ್ರದ ಪುಣೆಯ ಯರವಡಾ ಜೈಲಿಗೆ ಕಳುಹಿಸುತ್ತಾರೆ.

## ಜೈಲಿನ ಜೀವನ

೧೦.೫.೧೯೪೧ ರಿಂದ ೪.೧೨.೧೯೪೧ ರ ವರೆಗೆ ಸುಮಾರು ಎಂಟು ತಿಂಗಳುಗಳ ಕಾಲ ಅವರಿಗೆ ಶಿಕ್ಷೆಯಾಗುತ್ತದ್ದೆ. ಅವರು ಪುಣೆಯ ಯರವಡಾ ಜೈಲಿನಲ್ಲಿರುತ್ತಾರೆ. ಜೈಲಿನಲ್ಲಿದ್ದಾಗಲೂ ಅವರು ಎಂದಿಗೂ ಅಂಜಲಿಲ್ಲ, ಅಳುಕಲಿಲ್ಲ, ಧೃತಿಗೆಡಲಿಲ್ಲ. ಮೇಲಾಗಿ, ದೇಶಪ್ರೇಮ, ದೇಶಭಕ್ತಿ ಯಾವತ್ತೂ ಅವರ ಕಣಕಣದಲ್ಲಿ ಹಾಸುಹೊಕ್ಕಾಗಿತ್ತು. ಜೈಲಿನ ಜೀವನವನ್ನು ಸದುಪಯೋಗಪಡಿಸಿಕೊಳ್ಳಲು ಅವರು ಧನಾತ್ಮಕವಾಗಿರುತ್ತಿದ್ದರು. ಭವಿಷ್ಯದ ಜೀವನದ ಬಗ್ಗೆ ಚಿಂತನೆಯಲ್ಲಿ ತೊಡಗುತ್ತಾರೆ. ಯರವಡಾ ಜೈಲಿನಲ್ಲಿ ಕರ್ನಾಟಕ ಒಳಗೊಂಡಂತೆ ಮಹಾರಾಷ್ಟ್ರ ಹಾಗೂ ಗುಜರಾತಿನ ಅನೇಕ ದೇಶಭಕ್ತ ಸ್ವಾತಂತ್ರ್ಯ ಹೋರಾಟಗಾರರನ್ನು ಬಂಧಿಸಿಡಲಾಗಿತ್ತು.

ಅಲ್ಲಿ ಅವರಿಗೆ ಅನೇಕ ಮಹನೀಯರ ಪರಿಚಯವಾಗುತ್ತದ್ದೆ. ಸ್ವಾತಂತ್ರ್ಯ ಹೋರಾಟಗಾರರಾದ ಮೊಹರೆ ಹನಮಂತರಾಯರು, ರಂಗನಾಥ ದಿವಾಕರ, ಸತ್ಯಕಾಮ, ಮಡಿವಾಳೆಪ್ಪ ಪಟ್ಟಣಶೆಟ್ಟಿ, ಹ.ಗ. ಜೋಶಿ ಮಾಸ್ತರ, ಏಡಕೆಯವರು, ಜೆ.ಎಸ್. ಸಜ್ಜನ ವಕೀಲರು, ಹರಿಹರ ಚನ್ನಬಸಪ್ಪ ಹೀಗೆ ಅನೇಕ ಮಹನೀಯರ ಪರಿಚಯವಾಗುತ್ತದೆ. ಅವರೊಂದಿಗೆ ವ್ಯರ್ಥವಾಗಿ ಕಾಲ ಕಳೆಯದೇ, "ಸದಾ ಆತ್ಮವಿಶ್ವಾಸದಿಂದ ಇರಬೇಕು. ಬಂದದ್ದನ್ನು ಎದುರಿಸಬೇಕು" ಎಂದು ಧೈರ್ಯವನ್ನು ಇತರರಿಗೂ ಅವರು ತುಂಬುತ್ತಾರೆ. ಜೊತೆಗೆ ಸ್ವಾತಂತ್ರ್ಯ ಹೋರಾಟಗಾರರಾದ ಹಾಗೂ ನಾಲ್ಕರಿಂದ ಐದು ಸಾರಿ ಜೈಲಿಗೆ ಹೋಗಿಬಂದ ನರಗುಂದದ ಜಯರಾಮ ಅವರೊಂದಿಗೆ ಬೆರೆತು. ಅವರ ಮಾರ್ಗದರ್ಶನದಲ್ಲಿ ಪ್ರಗತಿಪರ ವ್ಯವಸಾಯ ಕುರಿತು ಚರ್ಚೆ ನಡೆಸುತ್ತಿದ್ದರು. ಮುಂದೆ ಅವರೊಬ್ಬ ಕೃಷಿ ತಜ್ಞರಾಗಿ ಹೊರಹೊಮ್ಮಲು ಇದರಿಂದ ಸಾಧ್ಯವಾಯಿತು. ಅಷ್ಟೇ ಅಲ್ಲದೇ ಹಿಂದಿ ಅಭ್ಯಾಸ, ಆಟ, ವ್ಯಾಯಾಮಗಳಲ್ಲಿ ತೊಡಗುತ್ತಾರೆ. ಜೈಲಿನಲ್ಲಿದ್ದಾಗಲೂ ಸದಾ ಕ್ರಿಯಾಶೀಲವಾಗಿರುತ್ತಾರೆ. ಜೈಲಿನ ಜೀವನವನ್ನು ಸದುಪಯೋಗ ಪಡಿಸಿಕೊಳ್ಳುತ್ತಾರೆ. ಅಲ್ಲಿನ ಜೀವನಶೈಲಿಗೆ ಎಂದಿಗೂ ಎದೆಗುಂದಲಿಲ್ಲ. ಅಲ್ಲಿನ ನಿಯಮಗಳಿಗೆ ಗಾಂಧೀಜಿಯವರಂತೆ ಶಿಸ್ತಿನ ಸಿಪಾಯಿಯಾಗಿದ್ದರು.



ಗಾಂಧೀಜಿಯವರ ನಿರಂತರ ಪರಿಶ್ರಮ, ದೇಶಾದ್ಯಂತ ಕ್ವಿಟ್ ಇಂಡಿಯಾ ದಂತಹ ಸಂಪೂರ್ಣ ಶಾಂತಿಯುತ ಯಶಸ್ವಿ ಚಳುವಳಿಗಳು, ಬ್ರಿಟಿಷರ ಕುತಂತ್ರಕ್ಕೆ ಬಗ್ಗದ ಪರಪ್ಪರಂತಹ ದೇಶಭಕ್ತರ ಹೋರಾಟಗಳು, ಅನೇಕರ ತ್ಯಾಗ, ಬಲಿದಾನಗಳ ಫಲವಾಗಿ ಬ್ರಿಟಿಷರು ಕಂಗೆಡುವಂತಾಯಿತು. ತಳಮಟ್ಟದಿಂದಲೇ ನಡೆದ ಭಾರತೀಯರ ಈ ಒಗ್ಗಟ್ಟಿನ ಮಂತ್ರಕ್ಕೆ ಬ್ರಿಟಿಷರು ಹಿಂದಡಿ ಇಡುವಂತೆ ಮಾಡಿತು. ೧೯೪೭ ಆಗಸ್ಟ್ ೧೫ ರಂದು ಭಾರತ ಸ್ವತಂತ್ರವಾಯಿತು. ಬ್ರಿಟಿಷರ ಬಾವುಟ ಕೆಂಪುಕೋಟೆಯಿಂದ ಕೆಳಗಿಳಿಯಿತು. ಭಾರತದ ತ್ರಿವರ್ಣ ಧ್ವಜ ಮೇಲೇರಿತು.

## ಮಾನವೀಯ ಮೌಲ್ಯಗಳ ಖಣಿ

ಸ್ವಾತಂತ್ರ್ಯ ಪಡೆದ ನಂತರವೂ ಯಾವುದೇ ರಾಜಕೀಯ ಲಾಭ ಪಡೆಯದೇ, ಪಟ್ಟಣವನ್ನೂ ಸೇರದೇ ಗ್ರಾಮದ ಉದ್ಧಾರಕ್ಕಾಗಿ ಬೇವೂರಿನಲ್ಲೇ ನೆಲೆ ನಿಂತರು. ಗಾಂಧೀಜಿಯವರ 'ಗ್ರಾಮ ಉದ್ಧಾರವಾಗದ ಹೊರತು ದೇಶ ಉದ್ಧಾರವಾಗದು' ಎಂಬ ತತ್ವವನ್ನು ಶಿರಸಾ ವಹಿಸಿ ಪಾಲಿಸಿದರು. ಜನತೆಯ ಸೇವೆಯೇ ಜನಾರ್ದನನ ಸೇವೆ ಎಂಬುದನ್ನು ಬಲವಾಗಿ ನಂಬಿದವರು. ಆ ನಿಟ್ಟಿನಲ್ಲಿ ಹಲವಾರು ಸಮಾಜಮುಖಿ ಚಿಂತನೆಯಲ್ಲಿ ತೊಡಗಿ ಸಮಾಜಕ್ಕೆ ಒಳಿತಾಗುವ ಹಲವಾರು ಕೈಂಕರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಗ್ರಾಮ ಸೊಸಾಯಿಟಿಯ ಅಧ್ಯಕ್ಷರಾಗಿ, ರೈತರ ಯೋಗಕ್ಷೇಮ, ಅಭ್ಯುದಯಕ್ಕಾಗಿ ಕಾರ್ಯೋನ್ಮುಖರಾದರು. ಆವಾಗಲೇ ಪ್ರಾರಂಭವಾದ ಸರಕಾರಿ ಪ್ರಾಥಮಿಕ ಶಾಲೆ ಹಾಗೂ ಸರಕಾರಿ ಆಸ್ಪತ್ರೆ ಕಟ್ಟಡವನ್ನು ತಾವೇ ಸ್ವತಃ ನಿಂತು ಕಟ್ಟಿಸುತ್ತಾರೆ. ಮನೆಮನೆಗೆ ನಳದ ಕುಡಿಯುವ ನೀರಿನ ವ್ಯವಸ್ಥೆಗಾಗಿ ಪಂಪ್ ಹೌಸನ್ನು ನಿರ್ಮಿಸುತ್ತಾರೆ. ಬಾವಿಗಳಿಂದ ಎಲ್ಲರೂ ಯಾವುದೇ ತಾರತಮ್ಯವಿಲ್ಲದೇ ನೀರನ್ನು ಸೇದಿ ಪಡೆಯಬಹುದು ಎಂಬ ಮಹತ್ವದ ನಿರ್ಧಾರವನ್ನು ಮಾಡುತ್ತಾರೆ. ಹರಿಜನರ ಮನೆಯಲ್ಲಿ ಊಟ ಮಾಡುವುದರ ಮೂಲಕ ಎಲ್ಲರೂ ಸಮಾನರೆಂಬ ಸಂದೇಶವನ್ನು ಸಾರುತ್ತಾರೆ. ಸರ್ವರೂ ಸಾಮರಸ್ಯದಿಂದ ಬದುಕನ್ನು ಸಾಗಿಸಬೇಕು ಎಂಬ ಮನೋಭಾವ ಅವರದಾಗಿತ್ತು. 'ಶಿಕ್ಷಣದಿಂದ ಮಾತ್ರ ಅಭಿವೃದ್ಧಿ ಸಾಧ್ಯ' ಎಂಬುದನ್ನು ಅರಿತು ತಮ್ಮ ಹತ್ತಿರ ಬಂದವರಿಗೆ ಅಕ್ಷರಜ್ಞಾನ ನೀಡಿ, ಸಹಿ ಮಾಡಲು ಕಲಿಸುತ್ತಾರೆ. ಹೀಗೆ ಹಲವಾರು ಜನಪರ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಾರೆ.

ಒಂದುಸಲ ಉತ್ತರೆ ಮಳೆ ಸತತವಾಗಿ ಒಂದು ತಿಂಗಳುಗಳ ಕಾಲ ಸುರಿಯುತ್ತಿತ್ತಂತೆ. ಜನರು ಮಾಡಲು ಕೆಲಸವಿಲ್ಲದೇ ಹೊಟ್ಟೆಗೆ ಊಟವಿಲ್ಲದೇ ಪರದಾಡುವ ಪರಿಸ್ಥಿತಿ ಬಂದಾಗ, ಪರಪ್ಪನವರು ತಮ್ಮ ಮನೆಯಲ್ಲಿರುವ ಜೋಳದಿಂದ ನುಚ್ಚನ್ನು ತಯಾರಿಸಿ ನುಚ್ಚು ಮತ್ತು ಸಾರನ್ನು ಮಳೆ ನಿಲ್ಲುವವರೆಗೆ ಜನರಿಗೆ (ಒಂದು ತಿಂಗಳ ಕಾಲ) ಬಡಿಸಿದರಂತೆ. ಅವರ ಸಾಮಾಜಿಕ ಕಳಕಳಿ, ಪರೋಪಕಾರಿ ಗುಣವನ್ನು ಜನರು ಇಂದಿಗೂ ಸ್ಮರಿಸುತ್ತಾರೆ. ಹಲವು ಸಂದರ್ಭಗಳಲ್ಲಿ ಹಣ ಹಾಗೂ ಆಕಳುಗಳನ್ನು ದಾನವಾಗಿ ನೀಡಿ ಔದಾರ್ಯತೆ ತೋರಿದ್ದೂ ಇದೆ. ಮಾನವೀಯ ಅಂತಃಕರಣದ ಮಾತೃಹೃದಯಿ ಅವರು. ಜನರ ಕಷ್ಟಕ್ಕೆ ಮಿಡಿಯುವ ಅವರ ಈ ಗುಣಕ್ಕೆ ಅಭಿನಂದನೆಗಳನ್ನು ಹೇಳಲೇಬೇಕು.

ಬೇವೂರು ಹಾಗೂ ಸುತ್ತಮುತ್ತಲಿನ ಜನ ಹೈಸ್ಕೂಲ್ ಶಿಕ್ಷಣಕ್ಕಾಗಿ ದೂರದ ಊರಿಗೆ ಹೋಗುವುದನ್ನು ಕಂಡು, ಬಿಲ್‌ಕೆರೂರಿನ ರುದ್ರಮುನಿ ಶಿವಾಚಾರ್ಯರ ಕೃಪಾಶೀರ್ವಾದದಿಂದ ಹಾಗೂ ಊರಿನ ಗಣ್ಯರ ಸಹಾಯ ಸಹಕಾರದಿಂದ ೧೯೬೬ ರಲ್ಲಿ ಆದರ್ಶ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದರು. ಅವರೇ ಸಂಸ್ಥಾಪಕ ಅಧ್ಯಕ್ಷರಾದರು. ಸನ್ಮಾನ್ಯ ಎಸ್. ಆರ್. ಕಂಠಿಯವರ ಸಹಕಾರದಿಂದ ಜನರಲ್ ಜಿ. ಜಿ. ಬೇವೂರ ಮಾಧ್ಯಮಿಕ ಶಾಲೆಯನ್ನು ಪ್ರಾರಂಭಿಸಿದರು. ಅವರ ಮೇಲಿನ ಪ್ರೀತಿ ವಿಶ್ವಾಸದಿಂದ ಹೈಸ್ಕೂಲ್ ಕಟ್ಟಡಕ್ಕಾಗಿ ಕೆಲವರು ಭೂಮಿ ಹಾಗೂ ಇನ್ನು ಕೆಲವರು ಧನಸಹಾಯವನ್ನು ನೀಡಿದರು. ಬಡ ಮತ್ತು ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗಾಗಿ ವಸತಿನಿಲಯ, ಅನಾಥಾಶ್ರಮವನ್ನು ಪ್ರಾರಂಭಿಸಿದರು. ಮಕ್ಕಳ ಶಿಕ್ಷಣಕ್ಕೆ ಉತ್ತಮ ವ್ಯವಸ್ಥೆ ಕೈಗೊಂಡು, ಅಡಿಪಾಯ ಹಾಕಿದ್ದು ಗಮನಾರ್ಹವಾಗಿದೆ. ಸಧ್ಯ ಸಂಸ್ಥೆ ಪದವಿಪೂರ್ವ, ಪದವಿ ಕಾಲೇಜು ಪ್ರಾರಂಭಿಸಿ ಗುಣಮಟ್ಟದ ಶಿಕ್ಷಣ ನೀಡುವ ಮೂಲಕ ಹೆಮ್ಮರವಾಗಿ ಬೆಳೆದಿದೆ. ೧೯೬೨ ರ ಚೀನಾ ಯುದ್ಧಕಾಲದಲ್ಲಿ ರಾಷ್ಟ್ರರಕ್ಷಣಾ ನಿಧಿಗೆ ತಮ್ಮ ಎಂಟು ಎಕರೆ ಭೂಮಿಯನ್ನು ದಾನ ಮಾಡಿದರು. ೧೯೭೨ ರಲ್ಲಿ ಅಂದಿನ ಪ್ರಧಾನಮಂತ್ರಿ ಇಂದಿರಾ ಗಾಂಧಿಯವರು ಅವರನ್ನು ತಾಮ್ರದಪಟ ನೀಡಿ ಗೌರವಿಸಿದ್ದೂ ಇದೆ. ತಮಗೆ ನೀಡುವ ಸ್ವಾತಂತ್ರ್ಯ ಹೋರಾಟಗಾರರ ಮಾಶಾಸನವನ್ನು ಸ್ವಂತಕ್ಕೆ ಬಳಸದೇ ಗ್ರಾಮದ ಅಭಿವೃದ್ಧಿಗಾಗಿ ಬಳಸುತ್ತಿದ್ದರು.



ಎಲ್ಲರಿಗೂ ಆದರ್ಶಪ್ರಾಯರಾಗಿ, ಬದುಕಿನುದ್ದಕ್ಕೂ ಸಮಾಜದ ಒಳಿತಿಗಾಗಿ ದೇಶದ ಶ್ರೇಯಸ್ಸಿಗಾಗಿ ದುಡಿದ ಪುಣ್ಯಾತ್ಮ ಪರಪ್ಪನವರು ದಿನಾಂಕ ೧.೭.೧೯೮೭ ರಂದು ದೈವಾಧೀನರಾಗುತ್ತಾರೆ. ಅವರ ಅಗಲಿಕೆಯಿಂದ ಜನರ ಕಂಬನಿಯ ಕಟ್ಟೆ ಒಡೆಯಿತು. ದೇಶಭಕ್ತ, ಗಾಂಧೀವಾದಿ, ಸ್ವಾತಂತ್ರ್ಯ ಹೋರಾಟಗಾರರು, ಶಿಕ್ಷಣ ಪ್ರೇಮಿಗಳು, ಮಾನವೀಯ ಮೌಲ್ಯಗಳ ಹರಿಕಾರ, ಅಪ್ರತಿಮ ನಾಯಕ, ಸರಳ ಸಜ್ಜನಿಕೆಯ ಅಪರೂಪದ ವ್ಯಕ್ತಿತ್ವದ ಪರಪ್ಪನವರು ಭೌತಿಕವಾಗಿ ದೂರಾದರೂ ಅವರ ಆಚಾರ ವಿಚಾರಗಳು, ತತ್ವ ಸಿದ್ಧಾಂತಗಳು, ಮಾಡಿದ ಒಳಿತಿನ ಕಾರ್ಯಗಳ ಮೂಲಕ ಪ್ರತಿಯೊಬ್ಬರ ಮನೆ ಮನಗಳಲ್ಲಿ ಚಿರಸ್ಥಾಯಿಯಾಗಿದ್ದಾರೆ. ವಚನಕಾರ ಉರಿಲಿಂಗದೇವರ ಒಂದು ವಚನದ ಸಾಲಿನಂತೆ

**ಶರಣರು ಲೋಕದಂತೆ ಬಾರರು**
**ಲೋಕದಂತೆ ಹೋಗರು**
**ಪುಣ್ಯದಂತೆ ಬಪ್ಪರು**
**ಜ್ಞಾನದಂತೆ ಇಪ್ಪರು**

ಎನ್ನುವಂತೆ ಅಪೂರ್ವವಾದ ಹೆಜ್ಜೆ ಗುರುತುಗಳನ್ನು ಮೂಡಿಸಿದ್ದಾರೆ. ಸತ್ವಯುತ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ಧಾರೆಯೆರೆದಿದ್ದಾರೆ. ಎಲ್ಲರ ಮನದಂಗಳದಲ್ಲಿ ಅಜರಾಮರರಾಗಿದ್ದಾರೆ. ಅವರ ಮೊಮ್ಮಗ ಶ್ರೀ ಅಶೋಕ ಸಜ್ಜನ ಅವರು ಅಜ್ಜನವರ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡು ಉತ್ತಮ ಜನಪರ ಕಾರ್ಯಗಳಲ್ಲಿ ಕ್ರಿಯಾಶೀಲರಾಗಿದ್ದಾರೆ. ಸಧ್ಯ ಬಾಗಲಕೋಟೆಯ ಪ್ರತಿಷ್ಠಿತ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದಲ್ಲಿ ವೈದ್ಯಕೀಯ ಕಾಲೇಜುಗಳ ಅಧ್ಯಕ್ಷರಾಗಿ ಸಕ್ರಿಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಬೇವೂರಿನ ಕೀರ್ತಿಪತಾಕೆಯನ್ನು ರಾಷ್ಟ್ರಮಟ್ಟದವರೆಗೂ ಪಸರಿಸಿದ, ಹೆಮ್ಮೆಯ, ಮೇರು ವ್ಯಕ್ತಿತ್ವದ ಪರಪ್ಪ ಸಂಗಪ್ಪ ಸಜ್ಜನ ಅವರ ಕುರಿತು ಎಷ್ಟು ಹೇಳಿದರೂ ಕಡಿಮೆಯೇ. ಆದರ್ಶಪ್ರಾಯರಾಗಿ, ಸಾರ್ಥಕ ಜೀವನ ನಡೆಸಿದ ಅವರು ಜನಮಾನಸದಲ್ಲಿ ಅಜರಾಮರರಾಗಿದ್ದಾರೆ.

❑

## ಪರಾಮರ್ಶನ ಗ್ರಂಥಗಳು

೧. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟ ೧ ಮತ್ತು ೩. ಸಂಪಾದಕರು – ಡಾ. ಸೂರ್ಯನಾಥ ಕಾಮತ.

೨. ಬಾಗಲಕೋಟೆ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿ ಒಂದು ಅಧ್ಯಯನ ಡಾ.ವಿನಯಕುಮಾರ ಹಿರೇಮಠ ಅವರ ಸಂಶೋಧನಾ ಮಹಾಪ್ರಬಂಧ.

೩. ಬಸವ ಸಿರಿ ಸ್ಮರಣ ಸಂಚಿಕೆ, ಸಂಪಾದಕರು – ಡಾ. ಪ್ರಕಾಶ ಖಾಡೆ.

೪. ಡಾ.ಸರೋಜಿನಿ ಪಾವಟೆ ಅವರ ಲೇಖನ.

೫. ಮಹಾಬಳೇಶ್ವರ ಗುಡಗುಂಟಿ ಅವರ ಲೇಖನ.



**ಆಲಮಟ್ಟಿ ಹಿನ್ನೀರಿನಲ್ಲಿ ಮುಳುಗಡೆಯಾಗಿರುವ ಬಾಗಲಕೋಟೆಯ ಭಾರತ ಸೇವಾದಳ ಕಟ್ಟಡ**

**ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ**
**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಯ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ನೆಹರು ಮೈದಾನ | ಡಾ. ವಸಂತ ಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಸತೀಶ ಕೆ. | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |